ಹೊರನಾಡ ಚಿಲುಮೆ

ಕಾಂಗರುನಾಡಿನ ಕನ್ನಡಿಗರಿಂದ ವಿಶ್ವ ಕನ್ನಡಿಗರ ಹೃದಯಕ್ಕೆ

ಆಸ್ಟ್ರೇಲಿಯಾದ ಮೊಟ್ಟಮೊದಲ ಕನ್ನಡ ಇ-ಮಾಸಪತ್ರಿಕೆ | Chilume Circulated in and around 10 countries | ಸಂಚಿಕೆ ೪, ಸೆಪ್ಟೆಂಬರ್ 2013

Find us on: facebook

ಹೊರನಾಡ ಚಿಲುಮೆ ಇ-ಮಾಸ ಪತ್ರಿಕೆಯ ಓದುಗರಿಗೆಂದು ತೆರೆಯಲಾಗಿರುವ ಫೇಸ್ಬುಕ್ ಗುಂಪು ಸೇರಿಕೊಳ್ಳಲು ಕೆಳಗಿನ ಲಿಂಕ್ ಕ್ಲಿಕ್ ಮಾಡಿ

JOIN CHILUME FACEBOOK GROUP (You have to be logged in to facebook to join)

ಚಿಲುಮೆಯ ಒಳಗೆ

ರಾಘವೇಂದ್ರ ಆರಾಧನೆ - ವರದಿ ... ಪು. ೧
ಸಂಪಾದಕೀಯ ... ಪು. ೨
ತವರಿನ ಸುದ್ದಿ ... ಪು. ೨

ಚಿಲುಮೆಯ ಒಳಗೆ

ಮಾಸ್ತರ್ ಹಿರಣ್ಣಯ್ಯ ಲೇಖನ ... ಪು. ೩
ಆರೋಗ್ಯ ... ಪು. ೪
ಆಲಿಸಿದೆ ಜಗನ್ಮಾತೆಯರಾ (ಹಾಸ್ಯ) ... ಪು. ೫

ಚಿಲುಮೆಯ ಒಳಗೆ

ರೀ ರೆಸಿಪಿ ಕೊಡ್ತೀರಾ! ... ಪು. ೬
ಕಥಾ ಚಿಲುಮೆ ... ಪು. ೬
ಕಾವ್ಯ, ಹಾಸ್ಯ ... ಪು. ೮

ಚಿಲುಮೆಯ ಒಳಗೆ

ಭಾಷೆಯ ಹಿರಿಮೆ – ಲೇಖನ ... ಪು. ೯
ಕನ್ನಡದಲ್ಲಿ ಟೈಪಿಂಗ್ ... ಪು. ೧೦
ಪದ ಪುಂಜ /ರಂಗೋಲಿ ... ಪು. ೧೨

ಚಿಲುಮೆಯ ಒಳಗೆ

ಕ್ರೀಡೆ – ಬ್ಯಾಡ್ಮಿಂಟನ್ ... ಪು. ೧೩
ಛಾಯಾ ಚಿಲುಮೆ ... ಪು. ೧೪
ಉತ್ತಮ ಪುಸ್ತಕದ ಲಕ್ಷಣಗಳು ... ಪು. ೧೫

ಚಿಲುಮೆಯ ಒಳಗೆ

ಕರ್ನಾಟಕದಲ್ಲಿ ಧರ್ಮ ಸಮನ್ವಯ ... ಪು. ೧೬
ವಿಜ್ಞಾನ ತತ್ವ ... ಪು. ೧೭
ಅಲ್ಲಲ್ಲಿ ಏನೇನು ... ಪು. ೧೭

ಮಂತ್ರಾಲಯವಾದ ಸಿಡ್ನಿ: ಶ್ರೀ ರಾಘವೇಂದ್ರ ಸ್ವಾಮಿಗಳ ಆರಾಧನೆ - ವರದಿ

ಶ್ರಾವಣದಲ್ಲಿ ಹಬ್ಬಗಳ ಸಾಲು ಒಂದರ ಹಿಂದೊಂದರಂತೆ ಬರುತ್ತದೆ. ಎಲ್ಲರೂ ಸೇರಿ ಸಡಗರದಿಂದ ನಲಿಯಲು ಈ ಹಬ್ಬಗಳು ಒಳ್ಳೆಯ ಸಾಧನಗಳಾಗಿವೆ. ಕರ್ನಾಟಕದಲ್ಲಿ ಅನೇಕ ಭಕ್ತಿ ಪಂಥದ ಸಂತರು, ಜನರು ಧರ್ಮ ಹಾದಿಯಲ್ಲಿ ನಡೆಯಲಿ ಎಂದು ಸುಮಾರ್ಗ ತೋರಿದ್ದಾರೆ. ಮನೆ ಮನಗಳಲ್ಲಿ ನಿಂತ ಅಂತಹ ಒಬ್ಬ ಶ್ರೇಷ್ಠ ಹರಿಭಕ್ತರು ಶ್ರೀ ರಾಘವೇಂದ್ರ ಸ್ವಾಮಿಗಳು. ಹೊರದೇಶದಲ್ಲಿ ಇದ್ದರೂ ಚಿಕ್ಕಂದಿನಿಂದ ನಮ್ಮತನದಲ್ಲಿ ಉಸಿರಾಗಿರುವ ಅವರ ಆರಾಧನೆಯನ್ನು ಮರೆಯಲು ಆದೀತೆ!

೨೦೧೩ ವರ್ಷದ ಶ್ರೀ ರಾಘವೇಂದ್ರ ಸ್ವಾಮಿಗಳ ಆರಾಧನೆಯನ್ನು ಬಹಳ ಭಕ್ತಿ ಪೂರ್ವಕವಾಗಿ ಸಿಡ್ನಿಯ ಆಬರ್ನ್ ಶ್ರೀಮಂದಿರದಲ್ಲಿ ಇತ್ತೀಚೆಗೆ ಆಚರಿಸಲಾಯಿತು. ಅದರ ಒಂದು ಪುಟ್ಟ ವರದಿ ಇಲ್ಲಿದೆ.

ಶ್ರಾವಣ ಮಾಸದ ಆಗಸ್ಟ್ ೨೫ ಭಾನುವಾರದಂದು ಬೆಳಗ್ಗೆ ಎಂಟಕ್ಕೇ ಹಲವಾರು ಭಕ್ತರು ಸಭೆಸೇರಿ ಪೂಜೆಗೆ ಸಜ್ಜುಗೊಳಿಸುವ ಮೂಲಕ ಸಡಗರದಿ ಸಿದ್ಧತೆ ಶುರುವಾಯಿತು. ನಂತರ ಕಾರ್ಯಕ್ರಮದಲ್ಲಿ ಗಣಪತಿ ಪೂಜೆ, ಪೂಜೆಗೆ ಕುಳಿತವರ ಸಂಕಲ್ಪವಾಯಿತು. ಅಭಿಷೇಕವು ಸುಮಾರು ಒಂದೂವರೆ ಘಂಟೆಕಾಲ ಹಾಲು, ಮೊಸರು, ಜೇನುತುಪ್ಪ, ಬಾಳೇಹಣ್ಣು, ಸಕ್ಕರೆಯಿಂದ ಮಾಡಿದ್ದು ನೇತ್ರಾನಂದ ತಂದಿತು. ಎಲ್ಲರೂ "ಮಂತ್ರಾಯಲದಲ್ಲೇ ಇದ್ದೆವೋ ಎಂಬಂತೆ ಅನಿಸುತ್ತಿದೆ" ಎಂದು ಹೇಳಿದರು.

ಯಥಾಪ್ರಕಾರ ಶ್ರೀಮಧ್ವಾಚಾರ್ಯರನ್ನು ನೆನಸಿ ಅವರ ವಾಯುಸ್ತುತಿ ಹೇಳುತ್ತಾ ಅಭಿಷೇಕ ಮಾಡಿ, ಎಲ್ಲರೂ ಶ್ರೀರಾಘವೇಂದ್ರ ಸ್ವಾಮಿಗಳ ಸ್ತೋತ್ರಗಳು ಹೇಳಿ ಮಹಾ ಮಂಗಳಾರತಿ ಮಾಡಿದರು . ಭಕ್ತಾದಿಗಳು ರಾಯರ ಪಾದಕ್ಕೆ ನಮಿಸಿದ ನಂತರ ಹೊರಾಂಗಣದಲ್ಲಿ ಎಲ್ಲರಿಗೂ ಪ್ರಸಾದ ವಿನಿಯೋಗವಾಯಿತು. ಮನೆಗಳಿಂದ ಮಾಡಿತಂದಿದ್ದ ಬಿಸಿಬೇಳೆ ಭಾತ್, ಪಾಯಸ ಇನ್ನೂ ಕೆಲವು ಭಕ್ಷ್ಯಗಳನ್ನು ಬಯೋ ಡೀಗ್ರೇಡಬಲ್ ತಟ್ಟೆಗಳಲ್ಲಿ ಹಂಚಿದ್ದೂ ಈ ವರ್ಷದ ವಿಶೇಷ.

ಮನೆಯೇ ಮಂತ್ರಾಲಯ, ಮನವೇ ದೇವಾಲಯ ಎಂದರೂ ಎಲ್ಲರೂ ಸೇರಿ ಪೂಜೆ ಮಾಡಿ, ಪ್ರಸಾದ ಸ್ವೀಕರಿಸಿದಾಗ ಸಿಗುವ ಆನಂದ ಹೇಳಲು ಅತೀತ.▪

ವರದಿ ಮತ್ತು ಚಿತ್ರಗಳು: ಶ್ರೀ ಸುಧೀಂದ್ರ ರಾವ್

ವೀಕ್ಷಿಸಿ

ದತ್ತಾತ್ರೇಯ ರಾಮಚಂದ್ರ ಬೇಂದ್ರೆ - ಇವರ ಬಗ್ಗೆ ತೆಗೆದ ಸಾಕ್ಷ್ಯ ಚಿತ್ರ
ನೋಡಲು ಚಿತ್ರ ಕ್ಲಿಕ್ ಮಾಡಿ (Click picture to view)

"ಬೇಂದ್ರಯವರೊಂದಿಗೆ ಸನ್ಮಾನ" - ಅನುಭವ ಲೇಖನ
ಮಾಸ್ಟರ್ ಮಾತಿನಲ್ಲಿ
ಪ್ರಾರಂಭ - ಪುಟ ೩

ಬೇಂದ್ರೆ ಅವರ "ಇಳಿದು ಬಾ ತಾಯಿ" ಗೀತೆ
ನೋಡಲು/ಕೇಳಲು ಚಿತ್ರ ಕ್ಲಿಕ್ ಮಾಡಿ (Click picture to view)

ಆನಂದಿಸಿ

ಸಂಪಾದಕೀಯ

ಬದರಿ ತ್ಯಾಮಗೊಂಡ್ಲು

ವಿನಾಯಕ ಚತುರ್ಥಿ ಒಂದು ಸಾಮಾಜಿಕ ಹಬ್ಬ. ಇದರ ಆಚರಣೆಯಿಂದ ಜನ ಸಮೂಹ ಒಂದಾಗಿ ಸೇರಬೇಕು ಎನ್ನುವ ಮನೋಭಾವ ತಿಲಕರದ್ದು ಎಂದು ನಾವೆಲ್ಲ ಅರಿತಿದ್ದೀವಿ. ಅದೇ ಲಹರಿಯಲ್ಲಿ ಇನ್ನೊಂದು ಆಯಾಮ ನೋಡೋಣ.

ನಮ್ಮ ಜೀವನದಲ್ಲಿ ಎಲ್ಲವೂ ಸರಾಗವಾಗಿ ನಮಗೆ ಬೇಕೆಂದಹಾಗೆ ನಡೆಯುವುದಿಲ್ಲ ಎಂದು ಅರಿತಿರುತ್ತೀವಿ. ಆದರೆ ಬಹಳಷ್ಟು ಸಾರಿ ಅದನ್ನು ಮರೆತು ಅವರಿವರಿಂದಲೇ ನಮಗೆ ತೊಂದರೆ ಆಯಿತು ಎಂದು ವೃಥಾ ದೂಷಿಸುತ್ತ ಕಾಲದೂಡುತ್ತೇವೆ ಕೂಡ. ಕೆಲವೊಮ್ಮೆ ಅದು ನಿಜವಿದ್ದಿರಬಹುದು, ಇಲ್ಲವೆನ್ನುವುದಿಲ್ಲ. ಆದರೆ ಅದೆಷ್ಟು ಬಾರಿ ನಾವೂ ಇನ್ನೊಬ್ಬರಿಗೆ ಯಾವ ರೀತಿಯಿಂದಾದರೂ ಅವರ ದುಃಖಕ್ಕೆ/ತೊಂದರೆಗೆ ಕಾರಣ ಆಗಿದ್ದೀವಿ ಎಂದು ಯೋಚಿಸಿದ್ದೀವಾ? ವಾಸ್ತವವಾಗಿ ಬಹುಷಃ ಈ ಪ್ರಶ್ನೆಗೆ "ಹೌದು ನನ್ನಿಂದ ಅವರಿಗೆ ತೊಂದರೆ ಆಗಿರಬಹುದು" ಎಂದು ವಿಶ್ಲೇಷಣೆ ಮಾಡುವ ಸ್ಥಿತಿ ನಮ್ಮ ಮನಗಳಲ್ಲಿ ಸಾಮಾನ್ಯವಾಗಿ ಬರುವುದಿಲ್ಲ. "ನಾನು ಮಾಡಿದ್ದೇ ಸರಿ. ಬೇರೆಯವರು ಮಾಡುವುದು ತಪ್ಪು" ಎಂದೇ ಅಹಂ ಪ್ರಧಾನವಾದ ನಮ್ಮೆಲ್ಲರ ಮನ ರಿಂಗಣಿಸುವುದು. ಹೀಗೆ ಹೇಳುವಾಗ ಇನ್ನೊಂದು ಪರಾಕಾಷ್ಠತೆಯನ್ನು ನಾನು ಹೇಳಲೇ ಬೇಕು. ಅದು "ನನ್ನಿಂದಾನೇ ಅವರಿಗೆ ತೊಂದರೆ ಆಗಿದೆಯೇನೋ" ಎಂದು ಹಲುಬಿ "ನೀವು ಹೇಳಿದಂತೇ ಆಗಲಿ" ಎಂದು ಸುಮ್ಮನೇ ಹ್ಞೂಗುಟ್ಟುವುದು ಮತ್ತು ನಂತರ ಕೊರಗುವುದು.

ಬದಲಾವಣೆ ಜಗದ ನಿಯಮವಾದರೂ, ನಮ್ಮ ಅಭ್ಯಾಸದ ಬದಲಾವಣೆ ಯಾವ ನಿಯಮಕ್ಕೂ ಸಿಕ್ಕುವುದಿಲ್ಲ. ನಿಸರ್ಗಕ್ಕೆ ಅಪಾಯ ಎಂದು ಗಣೇಶ ಬಂದು ಹೇಳಿದರೂ, ನಾವು ಗಣೇಶನ ವಿಗ್ರಹಕ್ಕೆ ರಾಸಾಯನಿಕ ಬಣ್ಣ ಹೊಡೆದೇ ಅವನ ಪೂಜೆ ಮಾಡುವುದು. ಅಷ್ಟು ಸ್ಥಿರ ನಮ್ಮ ಮನಸ್ಸು ಇಂತಹದ್ದರಲ್ಲಿ. ಗಣೇಶನ ಹಬ್ಬದ ಈ ಸಂದರ್ಭದಲ್ಲಿ, ನಮ್ಮ ನಡವಳಿಕೆ ಯಾರಿಗಾದರೂ ತೊಡಕಾಗಿದೆಯೇ ಎಂದು ಪರ್ಯಾಲೋಚಿಸಿ ಅಂತಹ ಅಭ್ಯಾಸವನ್ನು ತಿದ್ದುಕೊಂಡು ನಾವೇ ಅವರಿಗೆ "ಗಣೇಶನಾಗುವ" ಪ್ರಯತ್ನ ಮಾಡಬಹುದಲ್ಲವೇ! ▪

ಕರ್ನಾಟಕದ ವೈಶಿಷ್ಟ್ಯಗಳು

ತುಮಕೂರು ಬಳಿಯ ಗೂಳೂರು ಗಣೇಶನ ನಿರ್ಮಾಣ (೯.೫ ಅಡಿ) ಜೌತಿಯಂದು ಶುರುವಾಗಿ ದೀಪಾವಳಿಗೆ ಮುಗಿಯುತ್ತದೆ. ಹದಿನೆಂಟು ಸಮುದಾಯದ ಜನ ಪಾಲ್ಗೊಂಡು ಸಾಮರಸ್ಯ ಮೆರೆಯುತ್ತಾರೆ

ಮಸಾಲ ದೋಸೆಯ ಅವಿಷ್ಕಾರ ಉಡುಪಿಯಲ್ಲಿ ಎಂದು ಹೇಳಲಾಗುತ್ತದೆ. (ಉಡುಪಿಯ ಡಯಾನಾ ಹೋಟೆಲ್ ನಲ್ಲಿ). ಪ್ರಪಂಚದ 50 ಅತಿ ಪ್ರಿಯ ಖಾದ್ಯಗಳಲ್ಲಿ ಮಸಾಲ ದೋಸೆಯೂ ಒಂದು

ವಿಶ್ವ ಮಹಾ ಯುದ್ಧ 2 ರ ಸಮಯದಲ್ಲಿ ಅಕ್ಕಿಯ ಕೊರತೆ ಉಂಟಾದಾಗ, ಬೆಂಗಳೂರಿನ ಮಾವಳ್ಳಿ ಟಿಫಿನ್ ರೂಂ (MTR), ಗೋಧಿ ಮೂಲದ ರವೆಯಿಂದ ಮಾಡಿದ ಪ್ರಯೋಗ "ರವೆ ಇಡ್ಲಿ" ಯ ಸೃಷ್ಟಿಗೆ ಕಾರಣವಾಯಿತು

ತವರಿನ ಸುದ್ದಿ

ಕರ್ನಾಟಕ ಮತ್ತು ಭಾರತ ದೇಶದ ಮುಖ್ಯಾಂಶಗಳು - ಆಗಸ್ಟ್ ೨೦೧೩

- ✓ ತೆಲಂಗಾಣ - ಸೀಮಾಂಧ್ರ: ಮುಂದುವರಿದ ಬಿಕ್ಕಟ್ಟು, ರಾಜೀನಾಮೆ, ಬಂದ್, ಮೂಲಕ ತಮ್ಮ ತಮ್ಮ ನಿಲುವಳಿ ಪ್ರದರ್ಶನ
- ✓ ಬೆಲೆಕೇರಿ ಅದಿರು ಪ್ರಕರಣ: ರೆಡ್ಡಿ ಆರೋಪಿ ನಂ ೧
- ✓ ಸಬ್ಮರೀನ್ "ಸಿಂಧು ರಕ್ಷಕ್" ಸ್ಫೋಟ-18 ಸಾವು
- ✓ ಮೋಸ್ಟ್ ವಾಂಟೆಡ್ ಉಗ್ರರಾದ "ತುಂಡಾ" ಮತ್ತು "ಯಾಸಿನ್ ಭಟ್ಕಳ್" ಬಂಧನ
- ✓ ಅಧೋಮುಖವಾದ ರುಪಾಯಿಯ ಬೆಲೆ - ೬೫ ರ ಗಡಿ ದಾಟಿದ ರುಪಾಯಿ.
- ✓ ಲೋಕಸಭೆ ಮಧ್ಯಂತರ ಚುನಾವಣೆ, ಚಿತ್ರನಟಿ ರಮ್ಯಾಗೆ ಮತ್ತು ಡಿ ಕೆ ಶಿವಕುಮಾರ್ ಸೋದರ ಸುರೇಶ್ ಗೆ ವಿಜಯ
- ✓ ಆಹಾರ ಭದ್ರತೆ ಕಾಯ್ದೆ ಗೆ ಸಂಸತ್ ಒಪ್ಪಿಗೆ
- ✓ "ದುಂಢೀ" ಪುಸ್ತಕ ವಿವಾದ: ಧರ್ಮದ ಅವಹೇಳನ ಎಂದ ಧರ್ಮಿಷ್ಠರು: ವಾಕ್ಸ್ವಾತಂತ್ರ್ಯದ ಹರಣ ಎಂದ ಬುದ್ಧಿಜೀವಿಗಳು

ಮಾಸ್ಟರ್ ಮಾತು

ಮಾಸ್ಟರ್ ಹಿರಣ್ಣಯ್ಯ

ಲಂಚಾವತಾರ ಖ್ಯಾತಿಯ ಹಿರಿಯ ರಂಗಭೂಮಿ ಕಲಾವಿದರು

ಬೇಂದ್ರೆಯವರೊಂದಿಗೆ ಸನ್ಮಾನ - ಭಾಗ ೧

ಆಗ ಭಾರತದಲ್ಲಿ ತುರ್ತು ಪರಿಸ್ಥಿತಿಯ ಮಧ್ಯಕಾಲ. ಮಾತಾಜಿ ಇಂದಿರಗಾಂಧೀಜಿಯವರು ತಮ್ಮ ರಾಜಕೀಯ ಉಳಿವಿಗೆ ಅನ್ಯ ಮಾರ್ಗ ಕಾಣದೆ, ಕೇವಲ ಸ್ವಾರ್ಥಕ್ಕಾಗಿ 100 ಕೋಟಿ ನಿರಪರಾಧಿಗಳ ಇಡೀ ದೇಶವನ್ನು ನರಕಕ್ಕೆ ದೂಡಿದ ಮಹಾನ್ ಪರ್ವಕಾಲವದು. ಯಾವ ಸ್ವಾತಂತ್ರಕ್ಕಾಗಿ ಶತಮಾನಕ್ಕೂ ಮೀರಿದ ಕಾಲದಿಂದ, ಸಹಸ್ರಾರು ನಿಸ್ವಾರ್ಥ ನಾಯಕರು, ದೇಶಾಭಿಮಾನಿಗಳು, ತಮ್ಮ ಸರ್ವಸ್ವವನ್ನೂ ಬಲಿಗೊಟ್ಟು, ಸೆರೆವಾಸದಿಂದ ಹಿಡಿದು ನರಕವಾಸದವರೆಗೆ ಅನುಭವಿಸಿದ್ದರೋ, ಅಂಥಾ ಪರಮ ಪವಿತ್ರ ಸ್ವಾತಂತ್ರವನ್ನು, ತನ್ನ ವೈಯ್ಯುಕ್ತಿಕ ಹಾಗೂ ಕೌಟುಂಬಿಕ ರಾಜಕೀಯ ಲಾಭಕ್ಕಾಗಿ, ಕಿತ್ತೆದು, ಇಡೀ ನಾಡನ್ನು ಸೆರೆಮನೆಗೆ ತಳ್ಳಿದ್ದ ಅಕ್ಷಮ್ಯ ಕಾಲವದು. ಬ್ರಿಟಿಷರ ಕಾಲದಲ್ಲಿ ಒಂದು ಬಗೆಯ ಸೆರೆವಾಸವನ್ನು ಅನುಭವಿಸಿದ್ದ ನಾಡ ನೇತಾರರೆಲ್ಲಾ, ಈಗ ಪುನಹಃ ಮತ್ತೊಂದು ಬಾರಿ, ಹೆಣ್ಣಿನ ದುರಾಗ್ರಹಕ್ಕಾಗಿ ಸೆರೆಗೆ ಹೋಗಿ ಬಿದ್ದಿದ್ದ ಕಾಲವದು.

ಕಂಬಿ ಎಣಿಸಲು ಕಾರಣವೇ ಬೇಕಿಲ್ಲ. ಪೋಲೀಸಿನವರ ಬೂಟಿನ ಏಟಿಗೆ ಅವರಿವರೆಂಬ ಭೇದವೇ ಇಲ್ಲ. ಯಾವುದೋ ಓಬೀರಾಯನಕಾಲದ ವೈಯ್ಯುಕ್ತಿಕ ದ್ವೇಷವನ್ನೂ ಸಹ, ತೀರಿಸಿಕ್ಕೊಳ್ಳ ಬಹುದಾದ ಸುವರ್ಣಾವಕಾಶ ಆರಕ್ಷಕರಿಗೆ. ಬಾಯಿಂದ ಇಂದಿರಾ ಎಂಬ ನಾಲ್ಕಕ್ಷರ ಬಂದರೇ ಸಾಕು, ಅವನಿಗೆ ಜೈಲೇ. ಜೈಲು ಸೇರಿದವರಿಗಂತೂ ಮಾತಾಡಲೂ ಅವಕಾಶವಿಲ್ಲ, ಏನಿದ್ದರೂ ಅನುಭವಿಸುವದಷ್ಟೇ. ಎಲ್ಲರನ್ನೂ ಒಂದೇ ಕಡೆ ಇಟ್ಟಿದ್ದರೆ, ಇನ್ನೇನು ಮಸಲತ್ತು ಮಾಡಿಬಿಡುತ್ತಾರೋ ಎಂಬ ಅಳುಕಿಂದ, ಅಮ್ಮಾವರು ಒಬ್ಬೊಬ್ಬರನ್ನೂ ಪ್ರತ್ಯೇಕಿಸಿ ಪ್ರತ್ಯೇಕಿಸಿ, ಬೇರೆ ಬೇರೆ ಜೈಲುಗಳಲ್ಲಿ ಇರಿಸಿದ್ದನ್ನು ನೋಡಿದರೆ, ಎಲ್ಲವೂ ಅದೆಷ್ಟು ಪೂರ್ವಭಾವಿಯಾಗಿ ಆಲೋಚಿಸಿ, ನಿರ್ಧರಿಸಿ, ನಿಯೋಜಿಸಲ್ಪಟ್ಟಿದ್ದಿರಬಹುದು ಎಂಬುದು ವೇದ್ಯವಾಗುತ್ತಿತ್ತು. ಭಾರತ ಮಾತ್ರವಲ್ಲಾ, ಇಡೀ ವಿಶ್ವವೇ ಈ ವಿನಾಕಾರಣದ ತುರ್ತು ಪರಿಸ್ಥಿತಿಯನ್ನು ಕಂಡು ಕಂಗಾಲಾಗಿತ್ತು ಮಾತ್ರವಲ್ಲಾ ಖಂಡಿಸಿಯೂ ಇತ್ತು. ಭಾರತೀಯರಿಗೆ ಸಂವಿಧಾನದತ್ತವಾಗಿ ಬಂದಿದ್ದ ಮೂಲಭೂತ ಹಕ್ಕುಗಳಾದ ವಾಕ್‌ಸ್ವಾತಂತ್ರ-ವ್ಯಕ್ತಿಸ್ವಾತಂತ್ರ, ಅಭಿವ್ಯಕ್ತಿಸ್ವಾತಂತ್ರಾ, ಪತ್ರಿಕಾ- ಸ್ವಾತಂತ್ರ, ಇತ್ಯಾದಿ ಸಕಲವೂ, ಏಕವ್ಯಕ್ತಿಯಾದ ಮಾತಾಜಿ ಇಂದಿರಾಗಾಂಧಿಯವರ ಸ್ವಾರ್ಥ ಸಾಧನೆಗಾಗಿ ಬಲಿಕೊಡಲ್ಪಟ್ಟಿತ್ತು. ಇದನ್ನು ಕಂಡು ಕೆರಳಿದ ಅನೇಕ ವಿಚಾರವಾದಿಗಳು, ಬುದ್ದಿಜೀವಿಗಳು, ಸಾಹಿತಿಗಳು ತಮ್ಮ ಒಡಲ ಸಿಟ್ಟನ್ನು-ಅಸಮಾಧಾನವನ್ನೂ ಅನೇಕ ಬಗೆಗೆಗಳಲ್ಲಿ ಹೊರಹಾಕಿದ್ದೂ ಉಂಟು. ಉದಾಹರಣೆಗೆ ಕಡಲಭಾರ್ಗವ, ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರಾದ, ಪದ್ಮಭೂಷಣ ಡಾ|ಶಿವರಾಮ ಕಾರಂತರು, ತಮಗೆ ಕೇಂದ್ರ ಸರ್ಕಾರ ನೀಡಿದ್ದ ಪದ್ಮಭೂಷಣ ಪ್ರಶಸ್ತಿಯನ್ನು, ಮುಖಕ್ಕೆ ಹೊಡೆದಂತೆ ಸರ್ಕಾರಕ್ಕೇ ಹಿಂತಿರುಗಿಸಿ ಬಿಟ್ಟರು. ಕರ್ನಾಟಕದ ಅಜ್ಜ, ವರಕವಿ, ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರಾದ ದ.ರಾ.ಬೇಂದ್ರೆಯವರಂತೂ ತಮ್ಮ ನಿತ್ಯ ಉಪನ್ಯಾಸಗಳಲ್ಲಿ, ಅತ್ಯಂತ ಮೊನುಚಾಗಿ, ಎಲ್ಲಿಯೂ-ಯಾವಗಾಳಕ್ಕೂ ಸಿಗದಂತೆ, ಸರ್ಕಾರದ ಹೀನಕೃತ್ಯವನ್ನು ಖಂಡಿಸುತ್ತಲೇ ಇದ್ದರು. ಪದ್ಯಗಳ ಮೂಲಕ, ಕವನಗಳ ಮೂಲಕ, ಚುಟುಕು ಸಾಹಿತ್ಯಗಳ ದ್ವಾರ, ಧಾಳಿ ನಡೆಸಿಯೇ ಇದ್ದರು.



ಇಂಥಾ ವಿಷಮ ಸನ್ನಿವೇಶದಲ್ಲಿಯೂ ನಮ್ಮ ನಾಟಕಗಳು ನಿಲ್ಲುವಂತಿಲ್ಲ. ಕಾರಣ 70-80 ಜನರ ಕಂಪನಿ. ಆ ಎಲ್ಲಾ ಕುಟುಂಬಗಳಿಗೂ ನಾಟಕವೇ ಆಧಾರ. ನಮ್ಮ ನಾಟಕಗಳೋ, ಎಲ್ಲಾ ಸರ್ಕಾರದ ಅನೀತಿ-ಭ್ರಷ್ಟತೆಗಳನ್ನೂ ಕಟುವಾಗಿ, ಅಪರಾಧಿಗಳನ್ನು ಹೆಸರಿಸಿ ಟೀಕಿಸುವುದೇ ಆಗಿತ್ತು. ಅಂದ ಮೇಲೆ ಅಪಾಯದ ತೂಗುಗತ್ತಿ ಸದಾ ನನ್ನ ತಲೆಯ ಮೇಲೇ ತೂಗುತ್ತಿತ್ತು. ಕಾರ್ಯಾಂಗದಲ್ಲಿನ ಹೆಚ್ಚಿನವರಿಗೆ ನನ್ನ ಮೇಲೆ ಕೆಂಗಣ್ಣೇ. ನನ್ನ ಸಂಚಾರೀ ಊರುಗಳಲ್ಲಿ ಬಿಟ್ಟು, ಉಳಿದೆಲ್ಲಕಡೆಯೂ ನಮ್ಮ ಕಂಪನಿಯನ್ನು ಸರ್ಕಾರದವರು ಮುಚ್ಚಿಸಿ, ನನ್ನನ್ನು ಜೈಲಿಗೆ ಹಾಕಿದ್ದಾರೆಂದೇ ಸುದ್ದಿ. ಆದರೆ ಆ 18 ತಿಂಗಳುಗಳೂ ನಾನು ಕಂಪನಿಯನ್ನೂ ನಿಲ್ಲಿಸಲಿಲ್ಲಾ, ನಾಟಗಳನ್ನು ಆಡದೇ ಬಿಡಲಿಲ್ಲ, ಎಂದಿನ ನನ್ನ ತೀಕ್ಷಣಮಾತುಗಳ ಟೀಕೆಗಳನ್ನೂ ನಿಲ್ಲಿಸಲಿಲ್ಲ. ಇದು ಆದದ್ದಾದರೂ ಹೇಗೆ? ನನಗೆ ತೋಚೋದು ಎರಡೇ ಕಾರಣಗಳು-ಒಂದು, ತುರ್ತು ಪರಿಸ್ಥಿತಿಗೆ ಕಾರಣೀಭೂತರಾದ ಮಾತಾಜಿ ಇಂದಿರಾಗಾಂಧಿಯವರ ವರ್ತನೆಯಿಂದ ರೋಸಿ ಹೋಗಿದ್ದವರಿಗೆ, ಅದನ್ನು ಖಂಡಿಸಿ ಕೂಗುವ ಮತ್ತು ತಮ್ಮೊಳಗಿನ ಸತ್ಯವನ್ನು ಕೂಗಿ ಹೇಳುವ ಧ್ವನಿಯೊಂದರ ಅಗತ್ಯವಿತ್ತು. ಅದನ್ನು ನನ್ನಲ್ಲಿ ಕಂಡ ಸಮಾಜ ಹಾಗೂ ಸರ್ಕಾರ ಮತ್ತು ನ್ಯಾಯಾಂಗ ನನ್ನನ್ನು ಆಡಲು ಬಿಟ್ಟಿರಬೇಕು. ಮತ್ತೊಂದು ಕಾರಣ, ಸತ್ಯಕ್ಕೆ ಸಾವಿಲ್ಲ ಹಾಗೂ ತಡೆಯೂ ಇಲ್ಲ ಎಂಬ ನಾಣ್ನುಡಿಯಲ್ಲಿ ಸತ್ಯವಿರಬೇಕು. ಅಂತೂ ಆಗಲೂ ಸಾಗಿತ್ತು ನನ್ನ ಅರಣ್ಯರೋದನ.



ಆಗ ನಮ್ಮ ರಾಜ್ಯವನ್ನು ದಿ| ಡಿ.ದೇವರಾಜಅರಸು ರವರು ಆಳುತ್ತಿದ್ದರು. ಕರ್ನಾಟಕದಲ್ಲಿ ಮೊಟ್ಟಮೊದಲಿಗೆ ಇಂದಿರಾ ಕಾಂಗ್ರೆಸ್ಸ್ ಅನ್ನು ಹುಟ್ಟುಹಾಕಿದ ಕೀರ್ತಿ ಅರಸುರವರದ್ದು. ಅಷ್ಟು ಮಾತ್ರವಲ್ಲಾ, ಬೆಂಗಳೂರು ಮಹಾನಗರ ಪಾಲಿಕೆಯನ್ನೂ, ನಂತರ ಇಡೀ ರಾಜ್ಯವನ್ನೂ "ಐ ಕಾಂಗ್ರೆಸ್ಸಿಗೆ" ವಹಿಸಿಕೊಟ್ಟಿದ್ದೂ ಅವರೇ. ಕರ್ನಾಟಕದಲ್ಲಿ ಚಾಕೂ-ಚೂರಿ-ಚೈನುಗಳ ರಾಜಕೀಯಕ್ಕೆ ನಾಂದಿ ಹಾಡಿದ್ದೂ ಅರಸುರವರೇ. ಮೊಟ್ಟ ಮೊದಲಿಗೆ ಭೂಸುಧಾರಣೆಯ ಕಾನೂನನ್ನು ಜಾರಿಗೆ ತಂದು, ಉಳುವವನೇ ಒಡೆಯಾ ಎಂಬ ಮಂತ್ರಕ್ಕೆ ಎಡೆ ಮಾಡಿಕೊಟ್ಟು, ಸಮಾಜದ ಒಂದು ವರ್ಗದ ಶಾಪಕ್ಕೆ ಗುರಿಯಾದದ್ದೂ ಅರಸುರವರೆ. ಹೀಗೆ ನಾನಾ ಸಾಧನೆಗಳ ಮುಖ್ಯಮಂತ್ರಿಯಾಗಿದ್ದ ಅವರ ಕಾಲದಲ್ಲಿ, ಅದರಲ್ಲೂ ತುರ್ತು ಪರಿಸ್ಥಿತಿಯ ಮಧ್ಯ ಕಾಲದಲ್ಲಿ, ಧಾರವಾಡದಲ್ಲಿ ನಡೆದ ಘಟನೆಯೇ ಇದು-ಬೇಂದ್ರೆಯವರೊಂದಿಗೆ ನನಗೆ ಆದ ಸನ್ಮಾನ ...

ಮುಂದಿನ ಸಂಚಿಕೆಯಲ್ಲಿ ಮುಂದುವರಿಯುವುದು

ಧೂಮಪಾನ – ಪ್ರಶ್ನೋತ್ತರ

ರಾಜಿ ಜಯದೇವ್ (Accredited Practising Dietician)
Mrs Raji Jayadev, B.Sc (Hons) Dip Nutr & Diet (Syd)

ಧೂಮಪಾನ ವಯ್ಯಕ್ತಿಕ ವಿಚಾರವೇ ಸರಿ. "ಅಯ್ಯೋ ಆರಾಮಾಗಿ ಒಂದು ಸಿಗರೆಟ್ ಸೇದಲು ಬಿಡಲ್ಲಪ್ಪ ಜನ" ಅಂತ ಅನ್ನಿಸಬಹುದು ಸೇದುವವರಿಗೆ. ಅದರಿಂದ ಅವರಿಗೆ ಆನಂದ ಸಿಗುವುದಿರಲಿ, ಅವರಿಗಷ್ಟೇ ಅಲ್ಲದೇ ಸುತ್ತಮುತ್ತ ಇರುವವರಿಗೆ ಆಗುವ ತೊಂದರೆಯೇ ಹೆಚ್ಚು. ಈ ಹಿನ್ನಲೆಯಲ್ಲಿ ಒಂದೆರಡು ಪ್ರಶ್ನೋತ್ತರ ಎಲ್ಲರ ಹಿತಕ್ಕಾಗಿ ...

ಪ್ರಶ್ನೆ ೧. ಧೂಮಪಾನದ ಹೊಗೆಯಲ್ಲಿ ಅಂದಾಜು ಎಷ್ಟು ರಾಸಾಯನಿಕ ವಸ್ತುಗಳು (ಕೆಮಿಕಲ್ಸ್) ಇರುತ್ತದೆ?

ಅ. 10

ಆ. 100

ಇ. 2000

ಈ. 4000ಕ್ಕಿಂತ ಹೆಚ್ಚು

ಪ್ರಶ್ನೆ ೨. ಧೂಮಪಾನ ಮಾಡುವುದನ್ನು ನಿಲ್ಲಿಸಿದ ನಂತರ ಹೃದಯ ರೋಗದ ಅಪಾಯ ಅರ್ಧ ಕಡಿಮೆ ಯಾಗಲು ಎಷ್ಟು ಕಾಲ ಬೇಕು?

ಅ.1 ವರ್ಷದೊಳಗೆ

ಆ. 3-5 ವರ್ಷದೊಳಗೆ

ಇ. ಕನಿಷ್ಠ 15 ವರ್ಷ

ಈ. ಎಂದಿಗೂ ಇಲ್ಲ, ಅಪಾಯ ಎಂದಿಗೂ ತಪ್ಪದು.

ಪ್ರಶ್ನೆಗಳಿಗೆ ಉತ್ತರ

೧. 4000ಕ್ಕಿಂತ ಹೆಚ್ಚು

೨. 1 ವರ್ಷದೊಳಗೆ

ಹಬ್ಬದ ಸ್ಪೆಷಲ್

ತಿಲಕ ಏಕೆ ಧರಿಸಬೇಕು

ಲೇಖನ: ನಾಗೇಂದ್ರ ಅನಂತಮೂರ್ತಿ

ತಿಲಕ ಧರಿಸುವ ರೀತಿ, ವಿಧಾನ, ಉದ್ದೇಶ ಹಾಗು ಉಪಯೋಗದ ಬಗ್ಗೆ ಸ್ವಲ್ಪ ತಿಳಿದುಕೊಳ್ಳೋಣ. ತಿಲಕ ಎಂದ ಕೂಡಲೆ ಅದನ್ನು ಧರಿಸಿರುವವರಲ್ಲೂ ಹಾಗೂ ನೋಡುವವರಲ್ಲು ಒಂದು ಪವಿತ್ರ ಮನೋಭಾವ ಮೂಡಿಸುತ್ತದೆ. ಕುಂಕುಮ ಹಿಂದೂ ಧರ್ಮದ ಒಂದು ಧಾರ್ಮಿಕ ಸಂಕೇತವೆಂದೇ ಪರಿಗಣಿಸಲಾಗಿದೆ. ತಿಲಕದ ಬಣ್ಣ, ಆಕಾರ ಹಾಗು ಧರಿಸುವ ವಿಧಾನಗಳು ಪ್ರತಿಯೊಬ್ಬರೂ ಅನುಸರಿಸುವ ಜಾತಿ, ಪಂಗಡ ಮತ್ತು ಪೂಜಿಸುವ ಭಗವಂತನ ಮೇಲೆ ಅವಲಂಬಿಸುತ್ತದೆ.

ಮೂಲವಾಗಿ ಹಿಂದೆ ತಮ್ಮ ಸಾಮಾಜಿಕ ಜವಾಬ್ದಾರಿಗಳ ಮೇಲೆ ಅವಲಂಬಿತವಾಗಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರ ಎಂದು ಗುರುತಿಸಲಾಗುತ್ತಿತ್ತು. ಎಲ್ಲರೂ ಬೇರೆ ರೀತಿಯಲ್ಲಿ ತಿಲಕ ಧರಿಸುತ್ತಿದ್ದರು. ಬ್ರಾಹ್ಮಣರು ಸ್ವಚ್ಚತೆಯ, ತ್ರಿಕರಣ ಶುದ್ಧಿಯ ಹಾಗು ನಿರ್ಮಲತೆಯ ಸಂಕೇತವಾಗಿ ಬಿಳಿ ಬಣ್ಣದ ತಿಲಕ ಧರಿಸುತ್ತಿದ್ದರು. ಕ್ಷತ್ರಿಯರು ಶೌರ್ಯ, ಪರಾಕ್ರಮದ ಸಂಕೇತವಾಗಿ ಕೆಂಪು ಕುಂಕುಮವನ್ನು , ವೈಶ್ಯರು ಸಮೃದ್ಧಿಯ ಸಂಕೇತವಾಗಿ ಹಳದಿ ತಿಲಕವನ್ನೂ ಹಾಗೂ ಶೂದ್ರರು ಸೇವೆಯ ಸಂಕೇತವಾಗಿ ಕಪ್ಪು ಭಸ್ಮವನ್ನೂ ಧರಿಸುತ್ತಿದ್ದರು. (ಒಂದು ರೀತಿ ಈಗಿನ ಕಾಲದ Employment Badge ತರಹ ಅನ್ನಬಹುದು - Attender/Security/Clerk/Advisor ಎನ್ನುವಂತೆ)





ಇದಲ್ಲದೆ ವಿಷ್ಣುವಿನ ಆರಾಧಕರು U ಆಕಾರದ ತಿಲಕವನ್ನೂ, ದೇವಿಯ ಆರಾಧಕರು ದುಂಡಾದ ಕೆಂಪು ಕುಂಕುಮವನ್ನೂ ಹೀಗೆ ಹಲವು ಆಕಾರದ ತಿಲಕವನ್ನು ಸಹ ಧರಿಸುತ್ತಿದ್ದರು. ತಿಲಕವು ಸಾಮಾನ್ಯವಾಗಿ ಎರಡು ಹುಬ್ಬಿನ ಮಧ್ಯದ ಜಾಗದಲ್ಲಿ ಧರಿಸಬೇಕು. ಈ ಜಾಗವು ಯೋಚಿಸುವ ಹಾಗು ನೆನಪಿನ ಶಕ್ತಿಯ ಕೇಂದ್ರವಾಗಿದೆ ಎಂದು ಮನಃ ಶಾಶ್ತ್ರಜ್ಞರೂ ಹೇಳುತ್ತಾರೆ. ಯೋಗದ ಭಾಷೆಯಲ್ಲಿ ಹೇಳುವುದಾದರೆ ಆ ಜಾಗ "ಆಜ್ಞಾ ಚಕ್ರ"ವೆಂದು ಪರಿಗಣಿಸಲಾಗಿದೆ. ತಿಲಕವು ದುಷ್ಟ ಶಕ್ತಿಯನ್ನು ನಿಗ್ರಹಿಸುವ ಶಕ್ತಿಯ ಸಂಕೇತವೂ ಹೌದು ಎಂದು ನಂಬುತ್ತಾರೆ. ಸಂಪೂರ್ಣ ಶರೀರದಲ್ಲಿ ವಿದ್ಯುತ್ಕಾಂತೀಯ ತರಂಗಗಳ ರೂಪದಲ್ಲಿ ಚೈತನ್ಯವು ಉತ್ಪತ್ತಿಯಾಗುತ್ತದೆ, ವಿಶೇಷವಾಗಿ ಹಣೆ ಮತ್ತು ಎರಡು ಹುಬ್ಬುಗಳ ಮಧ್ಯೆ. ಅದೇ ಕಾರಣಕ್ಕಾಗಿಯೇ ಚಿಂತೆಯು ಶಾಖವನ್ನೂ, ಅದರಿಂದ ತಲೆನೋವನ್ನು ತರುತ್ತದೆ. ತಿಲಕವು ಅದನ್ನು ಶಮನಗೊಳಿಸಿ ನಮ್ಮಲ್ಲಿ ಚೈತನ್ಯ ನಾಶವಾಗುವುದನ್ನು ತಡೆಯುತ್ತದೆ.

ಪ್ಲಾಸ್ಟಿಕ್ ಬೊಟ್ಟುಗಳು ಅಲಂಕಾರಕ್ಕಾಗಿ ಬಳಕೆಯಾದರೂ ಅದರ ಮೂಲ ಉದ್ದೇಶವು ಈಡೇರುವುದಿಲ್ಲ. ತದೇಕ ಚಿತ್ತದಿಂದ ಪೂಜೆ ಮಾಡುವ ಉದ್ದೇಶದಿಂದಲೂ ಸಹ ಪೂಜೆಯ ಸಮಯದಲ್ಲಿ ತಿಲಕ ಧರಿಸಲಾಗುತ್ತದೆ. ಸಂಸ್ಕೃತಿಯ ಮತ್ತು ವೈಜ್ಞಾನಿಕ ಹಿನ್ನಲೆಯುಳ್ಳ ಈ ತಿಲಕಧಾರಣೆಯು ಒಂದು ಶುಭಪ್ರದವಾದ ವಿಧಾನ ▪

ರಾಂ ರಾಮ

ಇದು ಹಾಸ್ಯ ಪುಟ

ರಾಮನಾಥ್
ಭಾಷಣಕಾರರು, ಹಾಸ್ಯ ಲೇಖಕರು

ಆಲಿಸಿದೆನು ಮಾತು ಜಗನ್ಮಾತೆs.s.ಯರಾ..s.s.

ಸಿಡ್ನಿಯ ಕನಕಾಪುರ ನಾಣಿ ಜೊತೆ ಮಾತಾಡೋಣಾಂತ ಫೋನ್ ಮಾಡಿದೆ. ಎರಡನೆಯ ರಿಂಗ್‌ಗೇ ಕನೆಕ್ಷನ್ ಸಿಕ್ಕಿತು. ಆದರೆ ನಾನು ಹಲೋ ಅನ್ನೋಕ್ಕುಂಚೇನೇ ಮಾತುಗಳು ಕೇಳಿಸಿದವು. ಅವರಿವರ ಮಾತುಗಳನ್ನ ನೇರವಾಗಿ ಕೇಳೋದು ನನಗೆ ಒಂದಿಷ್ಟೂ ಇಷ್ಟವಿಲ್ಲ. ಆದರೆ ಅವರಿವರ ಮಾತುಗಳನ್ನ ಕದ್ದು ಕೇಳೋದನ್ನ ಮಾತ್ರ ಬಿಟ್ಟಿಲ್ಲ. ಈಗ ಅನಾಯಾಸವಾಗಿ ದೊರೆತ ಕ್ಯಾಸ್ಟಾಕ್! ಬಾಯ್ಮುಚ್ಚಿ, ಕಿವಿ ತೆರೆದು, ಉಸಿರು ಬಿಗಿ ಹಿಡಿದು ಕುಳಿತೆ.

"ಗೌರೀನಾ?"

"ಹೌದು. ನೀವು?"

"ಏಯ್, ನಾನು ಕಣೇ, ಮಹಾಲಕ್ಷ್ಮಿ"

"ಓ! ಯಾವಾಗ್ಬಂದೆ ಇಂಡಿಯಾದಿಂದ? ವಾಯ್ಸೇ ಛೇಂಜ್ ಆಗ್ಬಿಟ್ಟಿದೇ..."

"ಹೂ ಕಣೆ. ಕಲಬೆರಕೆ ತುಪ್ಪ, ಪೌಡರ್ ಹಾಲು ಹಾಕಿ ಕೊಟ್ಟ ಹೋಳಿಗೆ ತಿಂದು ಮೊದಲು ಥ್ರೋಟು, ಆಮೇಲೆ ಥ್ರೂಔಟು ಇಂಫೆಕ್ಷನ್ ಆಗಿದೆ"

"ಸೋ ಸಾರಿ. ಹೌ ವಾಸ್ ಯುವರ್ ವರಮಹಾಲಕ್ಷ್ಮಿ ಸೆಲಿಬ್ರೇಷನ್?"

"ಅದ್ಹೇಳಕ್ಕೆ ಫೋನ್ ಮಾಡಿದ್ದು. ಇಂಡಿಯಾಲಿ ಕಂಡೀಷನ್ಸ್ ಒಂದು ಚೂರೂ ಚೆನ್ನಾಗಿಲ್ಲ ಗೌರಿ. ನಿಮ್ಮೆಜಮಾನ್ರು ಏನೂ ಹೇಳಲಿಲ್ಲವಾ?"

"ಇಲ್ಲ. ಏನು ವಿಷಯ?"

"ಅಲ್ಲ ಗೌರೀ, ಈ ಗಂಡಸ್ರೇ ಹೀಗೆ ನೋಡು. ಮಿಸ್ಟರ್ ಈಶ್ವರ್‌ಗೆ ಉತ್ತರಾಖಾಂಡದಲ್ಲಿ ಕುತ್ತಿಗೆಗೇ ಆಪತ್ತು ಬಂದಿತ್ತು. ಎಲ್ಲೆಲ್ಲಿ ನೋಡಿದ್ರೂ ಅದೇ ಫೋಟೋಗಳು"

"ಕುತ್ತಿಗೇಗೇ ಬಂದಿತ್ತಾ? ವಿಧಿ ಯಾರ್ನೂ ಬಿಡಲ್ಲ ಅನ್ನಕ್ಕೆ ಇದೇ ಸಾಕ್ಷಿ ನೋಡು. ಅವತ್ತು ನಮ್ಮ ಗಣ್ಣು ಕುತ್ತಿಗೇಗೆ ಆಪತ್ತು ತಂದಿದ್ದಿದ್ದರ ಫಲ ಇದು. ಸಧ್ಯ! ಏನೂ ಅನಾಹುತ ಆಗಲಿಲ್ಲ ತಾನೆ?"

"ಆ ಅಲಕಾ ಇದ್ದಾಳಲ್ಲಾ...?

"ಯಾರು? ಉತ್ತರಾಖಾಂಡದಲ್ಲಿ ಗಂಗೆ ತರಹಾನೇ ಹರೀತಿರ್ತಾಳಲ್ಲಾ ಅವಳಾ?"

"ಅವಳೇ. ಗಂಗೇಗೇ ಕಾಂಪಿಟೇಷನ್ ಕೊಡೋ ಮಟ್ಟದಲ್ಲಿ ಹರಿದು ಬಂದ್ಳು. ನಿಮ್ಮೆಜಮಾನ್ರ ಕುತ್ತಿಗೆ ಹತ್ತಿರ ಬಂದಾಗ ಅವರು ವಿಷಕಂಠ, ಮುತ್ತಿಕೊಂಡ್ರೆ ಅವಳಿಗೂ ಇಂಫೆಕ್ಷನ್ ಆಗಬಹುದು ಅಂತ ಭಯ ಆಗಿ ವಾಪಸ್ ಹೊರಟ್ಹೋದ್ಳು."

"ಶಿವನೆ! ಅವಳೂ ಸೇರ್ಕೊಂಡ್ಬಿಟ್ಟಿದ್ದಿದ್ರೆ ಡಬಲ್ ಸವತಿ ಸಿಂಡ್ರೋಮ್ ಆಗ್ಬಿಡೋದು!"

"ಕಲಿಗಾಲ ಗೌರಿ. ಸಿಂಗರ್ಸು, ಡ್ಯಾನ್ಸರ್ಸು, ಕಲಾವಿದರೂಂದ್ರೆ ಮಹಿಳಾ ಅಭಿಮಾನಿಗಳು ಕೊಂಚ ಜಾಸ್ತೀನೇ. ಅದಿರ್ಲಿ, ನೀನು ಈ ಸರತಿ ಇಂಡಿಯಾಗೆ ಹೋಗ್ತಿಲ್ಲ ತಾನೆ?"

"ಹೋಗಲ್ಲಾಂದ್ರೆ ಆಗತ್ಯೇ? ನಮ್ಮ ವಿನಾಯ್ಕೂ ಅಂತೂ ತುದಿಗಾಲು, ತುದಿ ಇಲೀಲೇ ನಿಂತಿದಾನೆ. ಇನ್ನೇನು ಹೊರಡೋದೇ..."

"ಅದೇ ಬೇಡ ಅಂತ ಹೇಳಕ್ಕೇ ನಾನೀಗ ಫೋನ್ ಮಾಡಿದ್ದು?"

"ಯಾಕೆ? 'ಲಕ್ಷ್ಮಿ ಮಾತ್ರ ಚಂಚಲೆ, ಗೌರಿ ಕುಂತಲ್ಲೇ' ಅಂತ ಜನ ಆಡ್ಕೋಬೇಕೇನು?"

"ಬೀ ಸೀರಿಯಸ್ ಲಕ್ಷ್ಮಿ. ಬೇಕಾದ್ರೆ ಕಿಟ್ಟೂನೇ ಕೇಳು. ಇಂಡಿಯಾ, ಅದ್ರಲ್ಲೂ ಕರ್ನಾಟಕ ಮೊದಲಿನ ತರಹ ಇಲ್ಲ ಕಣೇ"

"ಯಾಕೆ? ಏನಾಯ್ತು ಕಿಟ್ಟೂಗೆ?"

"ಮೊನ್ನೆ ಜನ್ಮಾಷ್ಟಮಿ ಅಂತ ಹಿಂದಿನ ದಿನ ಎಲ್ಲ ಉಪವಾಸ ಇದ್ದು ಚಕ್ಕುಲಿ, ಕೋಡುಬಳೆ, ಮುಚ್ಚೋರೆ, ನಿಪ್ಪಟ್ಟು, ಎಲ್ಲಾ ತಿನ್ನೋಣಾಂತ ಹೋಗಿದ್ನಲ್ಲಾ, ಅವೆಲ್ಲಾ ಇರಲಿ, ಒಂದಿಷ್ಟು ವೈನವಾದ ಬೆಣ್ಣೆ ಕೂಡ ಸಿಗದೆ ಹಸಿದುಕೊಂಡೇ ವಾಪಸ್ ಬಂದ"

"ಸುಮ್ನೆ ತಮಾಷೆ ಮಾಡ್ಬೇಡ. ಕನ್ನಡದವರೂ... ಔದಾರ್ಯಕ್ಕೆ ಹೆಸರಾದವರೂ..."

"ಗುಣ ಇದ್ಬಿಟ್ರೆ ಹಣ ಇದ್ದೀತೇ? ಚಕ್ಕಲೀಲಿ ಚಕ್ಕಲಿಗಿಂತ ತೂತೇ ಜಾಸ್ತಿ ಇತ್ತಂತೆ, ಕೋಡುಬಳೆ ಸೆಮಿಸರ್ಕಲ್ಲೇ ಕಟ್, ನಿಪ್ಪಟ್ಟು ಹಳೇ ನಾಲ್ಕಾಣೆ ಸೈಥಿಂದು! ಎಲ್ಲೋ ಮೂಲೇಲಿದ್ದ ಡೈರಿ ಬೆಣ್ಣೇನ ಚೂರೇ ಚೂರು ನೆಕ್ಕಿದ್ದಕ್ಕೆ ಸಡನ್ ಇಂಫೆಕ್ಷನ್ ಆಗಿ ಧನ್ವಂತ್ರಿ ಹತ್ರ ಟ್ರೀಟ್‌ಮೆಂಟ್ ತೊಗೊಂಡು ಸುಧಾರಿಸ್ಕೋತಿದಾನೆ ಕಿಟ್ಟು"

"ನಿನ್ನ ಸೆಲಿಬ್ರೇಷನ್ನು?"

"ವರಮಹಾಲಕ್ಷ್ಮೀಂತ ಇಲ್ಲಿಂದ ಅಲ್ಲಿವರೆಗೂ ಹೋದ್ರೆ ಅಲ್ಲಿ ಫಾರಿನ್ ಲಕ್ಷ್ಮಿ ಇದಾಳಲ್ಲಾ, ಅದೇ ಆ ಡಾಲರಿ, ಅವಳ ಮೆರೆದಾಟ ಸಿಕ್ಕಾಪಟ್ಟೆ ಜಾಸ್ತಿ ಆಗ್ಬಿಟ್ಟಿದೆ. ರೂಪಾಯಿ ನೋಟಲ್ಲಿ ಗಾಂಧಿ ಇರೋದು ಈಗ ಸರಿಯಾಗಿದೆ ನೋಡು"

"ಯಾಕೆ?"

"ಉಪವಾಸದಿಂದ ಸೊರಗಿದ ಗಾಂಧೀಜಿ ತರಹಾನೇ ರೂಪಾಯೂ ಸೊರಗಿಹೋಗಿದೆ. ಹೀಗಾಗಿ ಸೀರಿಯಲ್ ಟೈಮ್ನಲ್ಲಿ ಬಂದ ಅತಿಥೀನ ನೋಡೋ ತರಹ, ನನ್ನನ್ನೂ ಕಾಟಾಚಾರಕ್ಕೆ ಬರಮಾಡ್ಕೊಂಡು, ಬೇಗ ಕಳಿಸಿಕೊಟ್ಬಿಟ್ರು. ಪರಿಸ್ಥಿತಿ ಹೀಗಿರುವಾಗ ನೀವು....."

"ಆದ್ರೂ ಹೋಗಲೇಬೇಕು. ಒಂದ್ಕೆಲ್ಸ ಮಾಡ್ತೀನಿ. ಗಣೇಶೂಗೆ, ನನಗೆ ಬೇಕಾದಷ್ಟು ಫುಡ್ ಪಾರ್ಸಲ್ ಮಾಡ್ಕೊಂಡೇ ಹೊರಡ್ತೀನಿ"

"ಹಠಮಾರಿ ನೀನು. ಈಶ್ವರನ್ನೇ ತಪ್ಪಸ್ಸು ಮಾಡಿ ಪಡೆದವಳು. ಸರಿ; ಹೋಗ್ಲೇಬೇಕೂಂದ್ರೆ ನಾನ್ಹೇಳೋದನ್ನೆಲ್ಲಾ ಪ್ಯಾಕ್ ಮಾಡ್ಕೊ"

"ಹೇಳು"

"ನಿನಗೊಂದು ಮಾಮೂಲು ಹೆಲ್ಮೆಟ್ಟು, ಗಣೇಶನಿಗೆ ಆನೆ ತಲೆ, ಕಿವಿಗಳು, ಸೊಂಡಿಲು ಮುಚ್ಚೋತರಹದ ಹೆಲ್ಮೆಟ್ಟು. ಅವನ ಇಲೀಗೊಂದು ಹೆಲ್ಮೆಟ್ಟು. ಆದನ್ನ ಈಗ್ಲೇ ಆರ್ಡರ್ ಮಾಡ್ಬಿಡು. ಹೋಗೋ ದಿವಸಕ್ಕೆ ಸಿಗಬಹುದು"

"ಜನರ ತಲೆ ಕಾಯೋ ನಮಗೆ ನಮ್ಮ ತಲೆ ಕಾಯ್ದುಕೊಳ್ಳಕ್ಕಾಗಲ್ವಾ?"

"ಹುಚ್ಚೆ. ತಲೆ ಇಲ್ದೆ ಇರೋವ್ರ ತಲೆ ಯಾರು ಬೇಕಾದ್ರೂ ಕಾಯ್ತಾರೆ. ತಲೆ ಇರೋವ್ರು ತಮ್ಮ ತಲೆ ಕಾಪಾಡ್ಕೋಬೇಕಷ್ಟೆ"

"ಏನಾಗ್ಬಹುದೂಂತ ನಿನ್ನ ಅಂಬೋಣ? ವಾಟ್ ಈಸ್ ಯುವರ್ ಅಪ್ರೆಹೆನ್ಷನ್ನು?"

ಶ್ರೀ ರಾಮನಾಥ್ ಅವರು ಉತ್ತರಿಸುವ "ನೀವು ಕೇಳಿದಿರಿ" ಬ್ಲಾಗ್ನಲ್ಲಿ ಲಭ್ಯ. ಕೆಳಗಿನ ಲಿಂಕ್ ಕ್ಲಿಕ್ ಮಾಡಿ
ನೀವು ಕೇಳಿದಿರಿ

ಮುಂದಿನ ಪುಟ ನೋಡಿ

"ಮೊದಲು ಅಡ್ಡಾದಿಡ್ಡಿ ಲಾರಿಯವರು ಮಾತ್ರ ತೊಂದರೆ ಕೊಡ್ತಿದ್ರು. ಆಮೇಲೆ ಆಟೋ, ಬೈಕ್‌ಗಳವರು ಅವರ ತರಹಾನೇ ಅಡ್ಡಾದಿಡ್ಡಿ ಓಡಿಸಕ್ಕೆ ಶುರು ಮಾಡಿ ಪರಮ ಘಾತುಕರಾದ್ರು. ಈಗ ಸೈಕಲ್ನವ್ರೂ..."

"ಸೈಕಲ್ ನಮ್ಮ ಗಣ್ಣಿಗೆ ಢಿಕ್ಕಿ ಹೊಡೆದ್ರೆ ಅದೇ ರಿಬೌಂಡ್ ಆಗತ್ತೆ ಅಷ್ಟೆ"

"ಸೈಕಲ್ ಡಿಕ್ಕಿ ಹೊಡೆಯಲ್ಲ ಗೌರಿ. ಮಲ್ಲೇಶ್ವರದಲ್ಲಿ ಆಗಿದ್ದು ಗೊತ್ತಿಲ್ವೇನು ನಿನಗೆ? ಸೈಕಲ್‌ಗೆ ಬಾಂಬ್ ಸಿಕ್ಸಿ ಸುಮ್ನೆ ಒಂದ್ಕಡೆ ನಿಲ್ಲಿಸ್ತಾರೆ. ಅದು ಸುತ್ತಮುತ್ತ ಇರೋವ್ರನ್ನೆಲ್ಲಾ ಢಂ ಅನ್ಸತ್ತೆ. ಮೊದಲೇ ನಿನ್ನ ಮಗ ಮುಗ್ಧ. ಎಲ್ಲರ ಜೊತೇನೂ ನಗುನಗುತ್ತಾ ಇರ್ತಾನೆ. ಎಲ್ಲೋ ಹೋಗಿ, ಏನೋ ನೋವುಗಳು ಆದಾತೂಂತ ಮುನ್ನೆಚ್ಚರಿಕೆಗೆ ಈ ಹೆಲ್ಮೆಟ್ಟುಗಳು"

"ಅಗ್ರೀಡ್. ನೆಕ್ಸ್ಟ ಹೇಳು"

"ಎರಡು ಆಕ್ಸಿಜನ್ ಮಾಸ್ಕ್"

"ನಾವು ಹೋಗ್ತಿರೋದು ದೇವಸ್ಥಾನಕ್ಕೆ, ನರ್ಸಿಂಗ್‌ಹೋಂಗಲ್ಲ"

"ಅದಕ್ಕೇ ಹೇಳಿದ್ದು! ಡಾಲ್ಡಾ ದೀಪದ ವಾಸನೆ, ಕ್ಲೀನೇ ಮಾಡ್ದೇಯಿರೋ ಗರ್ಭಗುಡಿ ವಾಸನೆ,
ಢಂ ಪಟಾಕಿಗಳ ಸುಟ್ಟ ವಾಸನೆ..."

"ಆಯ್ತು ಬಿಡು. ಎರಡು ಆಕ್ಸಿಜನ್ ಮಾಸ್ಕ್. ನೆಕ್ಸ್ಟ?"

"ಇಯರ್ ಪ್ಲಗ್ಗು, ನೋಸ್ ಫಿಲ್ಟ್‌ರು, ಟ್ರಂಕ್ ಫಿಲ್ಟ್‌ರು"

"ಯಾಕೆ?"

"ನಾಯ್ಸ್ ಪಲ್ಯೂಷನ್ನು, ಸ್ಮೋಕ್ ಪಲ್ಯೂಷನ್ನು ಎದುರಿಸಕ್ಕೆ. ನಿನಗೆ ಕಿವಿ, ಮೂಗಿಗೆ. ಮಗನಿಗೆ ಕಿವಿ, ಸೊಂಡಲಿಗೆ"

"ನೆಕ್ಸ್ಟ?"

"ನಿನ್ನ ಮಗನಿಗೆ ಬೇಕಾಗುವಷ್ಟು ಗರಿಕೆ ಹುಲ್ಲು"

"ನೀನೂ ಸರಿಯೇ. ಅಷ್ಟು ದೊಡ್ಡ ಬೆಂಗಳೂರಲ್ಲಿ ಗರಿಕೆ ಹುಲ್ಲು ಸಿಗಲ್ವೇನೇ ಲಕ್ಷ್ಮಿ?"

"ಎಲ್ಲೆಲ್ಲಿ ನೋಡಲಿ, ಕಾಂಕ್ರೀಟೇ ಕಾಣುವೆ. ರೋಡಲ್ಲಿ, ಮೋರಿಯಲಿ, ಮನೆಯಲು ಹುಲ್ಲು ಎಲ್ಲು ಕಾಣದೈ"

"ಸುತ್ತಮುತ್ತ ಹಳ್ಳಿಗಳಲ್ಲಿ?"

"ಬೆಂಗಳೂರಿನ ಗಾರ್ಬೇಜು ಅಲ್ಲೂ ಹರಡಿ ನೋ ಹುಲ್ಲೂ ಈಸ್ ಸೂಟಬಲ್ಲೂ ಗೌರಿ"

"ಸರಿ. ಹುಲ್ಲೂ ತೊಗೋತೀನಿ. ಇನ್ನೇನು ತೊಗೋಬೇಕು ಹೇಳು"

"ಸಾಧ್ಯವಾದರೆ ನಿಮ್ಮನ್ನ ಕರೆದೋವ್ರೇ ಟ್ರಾನ್ಸ್‌ಪೋರ್ಟ್ ವ್ಯವಸ್ಥೆ ಮಾಡಕ್ಕಾಗಂತ್ತಾಂತ ಕೇಳು"

"ಯಾಕೆ?"

"ಊರು ಭರ್ತಿ ಹಳ್ಳಗಳಿವೆ. ಗಣೇಶನ ಇಲಿ ಯಾವುದೋ ಹಳ್ಳದಲ್ಲಿ ಇಳಿದ್ಬಿಟ್ರೆ ಹತ್ತಕ್ಕೆ ತುಂಬಾ ಕಷ್ಟ ಆಗತ್ತೆ. ಹಾಗೇ ಹೋಗ್ತಾ ನಿನಗೊಂದಷ್ಟು ಒಬ್ಬಟ್ಟು. ನಿನ್ನ ಮಗನಿಗೊಂದಷ್ಟು ಕಡುಬು ಕಟ್ಟಿಸ್ಕೊಂಡೇ ಹೋಗು"

"ಅಲ್ವೇ ಲಕ್ಷ್ಮೀ, ಎಲ್ಲಾ ನಾವೇ ತೊಗೊಂಡ್ಹೋದ್ರೆ ಅವರೇನೇ ಹಬ್ಬ ಮಾಡೋದೂ?"

"ಅವರು ಕೊಡೋದು ಯಾವ ಮೂಲೇಗೂ ಆಗಲ್ಲ ಗೌರಿ. ನಿನಗೆ ಗೊತ್ತಾಗಲ್ಲ. ಈಗ 50% ಜನಕ್ಕೆ ಡಯಾಬಿಟಿಸ್ಸು, ಇನ್ನು 50% ಜನಕ್ಕೆ ಡಯಟ್ಟು. ಹೀಗಾಗಿ ಸಿಹಿ ಮಾಡೋದೇ ಅಪರೂಪ ಆಗ್ಬಿಟ್ಟಿದೆ. ಮಾಡಿದರೂ ತೀರಾ ಸಣ್ಣಸಣ್ಣದ್ದು. ಹಿಟ್ಟು ಸೂಪರ್ ಹಿಟ್ಟಾಗಿರಲ್ಲ, ತುಪ್ಪ ತಿಪ್ಪೆಗೂ ಯೋಗ್ಯವಾಗಿರಲ್ಲ. ಇಂಥಾದ್ದನ್ನೆಲ್ಲಾ ದೇವರುಗಳಾದ ನಾವು ತಿನ್ನೋದು ಸರಿಯಲ್ಲ ಅಲ್ಲವಾ?"

"ಭಕ್ತರು ಏನು ಕೊಟ್ರೂ ನಾವು ತಿನ್ಲೇಬೇಕಲ್ವಾ ಲಕ್ಷ್ಮಿ?"

"ಒಪ್ಕೊಂಡೆ ನಿನ್ಮಾತು. ಆದರೆ ನಿಜವಾದ ಭಕ್ತಿ ಇರೋವ್ರು ವಿರಳ ಗೌರಿ.
ಎಲ್ಲರೂ ದುಡ್ಡು, ವಿದ್ಯೆ, ಅಧಿಕಾರ, ಅಂತಸ್ತು, ಮೋಕ್ಷ ಕೇಳ್ಕೊಂಡೇ ಪೂಜೆ ಮಾಡ್ತಾರ್ಯೇ ವಿನಹ ಇಷ್ಟು ದಿನ
ನಿನ್ನ ಸೇವೆಗೆ ಅವಕಾಶ ಕೊಟ್ಯಲ್ಲಾ, ಅಷ್ಟೇ ಸಾಕು, ಥ್ಯಾಂಕ್ಸ್ ಅನ್ನೋ ಗುಡ್ ಓಲ್ಡ್ ಕ್ವಾಲಿಟಿ ಭಕ್ತ ಒಬ್ನೂ ಕಾಣೆ"

"ಈಗೇನು ಮಾಡೋದೇ? ನಿನ್ನ ಮಾತೂ ಸರಿ ಅನ್ಸತ್ತೆ. ಆದರೆ ಹೋಗದೆ ಇದ್ರೆ ನನಗೂ ವರ್ಷಕ್ಕೊಂದು ಪಿಕ್‌ನಿಕ್ ಲಾಸು,
ಗಣೇಶಂಗೂ ಮನಸ್ಸಿಗೆ ಬೇಜಾರು."

"ಇನ್ನೇನ್ಮಾಡಕ್ಕಾಗತ್ತೆ. ಶಿವನ ಮೇಲೆ ಭಾರ ಹಾಕಿ ಹೋಗ್ಬಾ. ಸರಿ ಕಣೆ. ನಮ್ಮೆಜಮಾನ್ರು ಕೂಗ್ತಿದಾರೆ.
ಕಾಲೊತ್ತೋ ಟೈಮಾಯ್ತು. ಬರ್ತೀನಿ. ಬೆಸ್ಟ್ ವಿಷಸ್. ಬೈ ದಿ ವೇ, ಬೆಂಗಳೂರಲ್ಲಿ ಗಣೇಶನ್ನ ಬಿಡಕ್ಕೆ ಕೆರೇಲೂ ನೀರಿಲ್ಲ,
ನಲ್ಲೀಲೂ ನೀರ್ಬರಲ್ಲ. ಒಂದೆರಡು ಬಕೆಟ್ ನೀರು, ಕುಡಿಯಕ್ಕೊಂದಷ್ಟು ಕಾದಾರಿದ ನೀರು ತೊಗೊಂಡೇ ಹೋಗು.
ಬಂದ್ಮೇಲೆ ಫೋನ್ ಮಾಡು. ಬೈ"

ಕ್ರಾಸ್‌ಕನೆಕ್ಷನ್ ಕಟ್ ಆಯಿತು. ಸ್ಟ್ರೈಟ್ ಕನೆಕ್ಷನ್ ಸಿಗಲೇ ಇಲ್ಲ.

ನಿಮಗೇನಾದರೂ ನಾಣಿ ಸಿಕ್ಕರೆ ಹೀಗ್ಹೀಗಾಯ್ತು ಅಂತ ಹೇಳ್ಬಿಡಿ.

ನಾಳೇನೇ ಹಬ್ಬ.
ಬಾಳೇಕಂಬ ತರ್ದೇಯಿದ್ರೆ ನನ್ನನ್ನ ಸಿಗಿದು ತೋರಣ ಕಟ್ತೇನೀಂತ ಮನೆಯವಳು ಆಶ್ವಾಸನೆ ಕೊಟ್ಟಿದ್ದಾಳೆ.
ರಣ ಆಗಿ ತೋರಣ ಆಗಕ್ಕುಂಚೆ ಮಾರ್ಕೆಟ್‌ಗೆ ಹೋಗ್ಬೇಕು. ಬರ್ಲಾ.....ಬಾ...ಯ್.....!!!!!!! ▪

ರಾಮನಾಥ್ ಅವರ
"ರಾಜಕೀಯ ರಾಗ" - ಅಣಕುವಾಡುಗಳು
YouTube ನಲ್ಲಿ ನೋಡಲು
ಕೆಳಗಿನ ಚಿತ್ರ ಕ್ಲಿಕ್ಕಿಸಿ

ಸುಮ್ಕೆ ನಕ್ಬಿಡಿ



ನಾನೂ ಜನಸಾಮಾನ್ಯರ ಹಾಗೇ ಇರ್ತೀನಿ ಅಂತ ಎರಡೇ ಎರಡು ದಿನ ಹಳ್ಳಿಯಲ್ಲಿ ಬಡವರ ಮನೆ ಊಟ ಮಾಡಿದೆ ಅಂತ ಹೇಳ್ತಿದ್ರು....

ಕಥಾ ಚಿಲುಮೆ

ಕುಂಟು ನಾಯಿಮರಿ

ಲೇಖಕರು: ಕನಕಾಪುರ ನಾರಾಯಣ

ದೂರದ ಫಾರ್ಮ್ ಹೌಸ್ ಬಳಿಯಲ್ಲಿ "ನಾಯಿ ಮರಿಗಳು ಮಾರಾಟಕ್ಕಿವೆ " ಎಂದು ಫಲಕವೊಂದು ತೂಗಾಡುತ್ತಿತ್ತು. ಡ್ರೈವರ್ ಗೆ ಕಾರ್ ನಿಲ್ಲಿಸಲು ಹೇಳಿ ಪುಟ್ಟ ಬಾಲಕ ಕಾರಿನಿಂದಿಳಿದು ಅಲ್ಲಿದ್ದ ಮಾಲೀಕನನ್ನು ಕಂಡು "ನನಗೆ ಒಂದು ನಾಯಿಮರಿ ಬೇಕಿದೆ ಕೊಳ್ಳಬಹುದೇ" ಎಂದ, ಬೋರ್ಡ ಹಾಕಿರುವುದೇ ಉಂಟಂತೆ ಸರಿ "ಒಂದು ನಾಯಿಮರಿಗೆ ಹತ್ತು ಡಾಲರ್ ಆಗುತ್ತದೆ" ಎಂದ ಮಾಲೀಕ, ಬಾಲಕ ತನ್ನ ಜೇಬಿನಡಿಗೆ ಕೈ ಹಾಕಿ ಹುಡುಕಿ ತಡಕಿ "ನನ್ನ ಬಳಿ ಇರುವುದೇ ಎಂಟು ಡಾಲರ್ ಮಾತ್ರ, ಆಗಬಹುದಾ" ಎಂದು ಮುಖ ಪೆಚ್ಚಗೆ ಮಾಡಿ ಹೇಳಿದ. ಹೋಗಲಿ ಮಕ್ಕಳಿಗೆ ತಾನೆ ಎಂದು ಮಾಲೀಕ ನಾಯಿ ಗೂಡಿನ ಕಡೆ ಜೋರಾಗಿ ಶಿಳ್ಳೆ ಹೊಡೆದ, ಉಣ್ಣೆಯ ಉಂಡೆಗಳಂತೆ ಗುಂಡುಗುಂಡಾದ ನಾಯಿ ಮರಿಗಳು ಗುಡುಗುಡು ಓಡಿ ಬಂದವು,"ನಿನಗೆ ಯಾವುದು ಬೇಕೇ ಅರಿಸಿಕೋ" ಎಂದ ಮಾಲೀಕ,

ಅಷ್ಟರಲ್ಲಿ ಗೂಡಿನ ಕಡೆಯಿಂದ ಮತ್ತೊಂದು ಮರಿ ನಿಧಾನವಾಗಿ ಉಳಿದ ಮರಿಗಳ ಗುಂಪನ್ನು ಸೇರಲು ಕಷ್ಟಪಟ್ಟು ಓಡುತ್ತಾ ಬರುವುದನ್ನು ಕಂಡು ಬಾಲಕ "ನನಗೆ ಆ ಮರಿ ಬೇಕು" ಎಂದ, "ಅಯ್ಯೋ ಅದು ಬೇಡ ಮಗು ನಿನಗೆ ಅದರ ಜೊತೆ ಆಡಲು ಅಷ್ಟು ಸೂಕ್ತವಲ್ಲ ನೋಡು ಅದು ಕುಂಟ ನಾಯಿ ಮರಿ" ಎಂದ.

ತಕ್ಷಣ ಬಾಲಕ ತನ್ನ ಬಲಗಾಲಿನ ಪ್ಯಾಂಟನ್ನು ಮೇಲಕ್ಕೆ ಸರಿಸಿ ಸ್ಟೀಲ್ ನಿಂದ ಮಾಡಿದ ತನ್ನ ಕೃತಕವಾದ ಕಾಲನ್ನು ತೋರಿಸಿ "ಇರಲಿ ನನಗೂ ಅಷ್ಟೇನು ಜೋರಾಗಿ ಓಡಲು ಸಾಧ್ಯವಿಲ್ಲ ಅದರ ಕಷ್ಟವನ್ನು ನಾನೊಬ್ಬನೇ ಅರ್ಥಮಾಡಿಕೊಳ್ಳಬಲ್ಲೆ" ಎಂದು ಓಡಿಬಂದು ಬಾಗಿ ಬಾಚಿ ತಬ್ಬಿ ಆ ಮರಿಯನ್ನು ಮನೆಗೆ ಕರೆದುಕೊಂಡು ಹೋದ.▪

ರವೆ ಹೋಳಿಗೆ

ಬೇಕಾಗುವ ಸಾಮಗ್ರಿಗಳು

- ಒಂದು ಕಿಲೋ ಮೈದಾಹಿಟ್ಟು - ಒಂದು ಕಿಲೋ ಸಕ್ಕರೆ
- ಅರ್ಧಕಿಲೋ ಸಣ್ಣರವೆ
- ಯಾಲಕ್ಕಿ 10
- ಕಾಲು ಕಿಲೋ ತುಪ್ಪ - ಅರ್ಧ ಬಟ್ಟಲು ಎಣ್ಣೆ

ಮಾಡುವ ವಿಧಾನ

- ಬಾಣಲೆಯಲ್ಲಿ ರವೆಯನ್ನು ಘಂ ಎಂದು ವಾಸನೆ ಬರುವವರೆಗೂ ಹುರಿದು ಅದಕ್ಕೆ ಎರಡರಷ್ಟು ನೀರು ಹಾಕಿ ಬೇಯಿಸಿ ಸಕ್ಕರೆ ಸ್ವಲ್ಪ ತುಪ್ಪ ಬೆರೆಸಿ ಬಾಡಿಸಿ
- ಆರಿದ ರವೆಮಿಶ್ರಣಕ್ಕೆ ಯಾಲಕ್ಕಿ ಪುಡಿ ಬೆರೆಸಿ ನಿಂಬೆ ಗಾತ್ರದ ಉಂಡೆಗಳನ್ನು ಮಾಡಿಕೊಳ್ಳಿ(ಹೂರಣ)
- ಮೈದಾಹಿಟ್ಟನ್ನು ಪೂರಿ ಹಿಟ್ಟಿನಂತೆ ಚೆನ್ನಾಗಿ ಕಲಸಿ ನಾದಿರಿ
- ಹಿಟ್ಟನ್ನು ನಿಂಬೆ ಗಾತ್ರದಲ್ಲಿ ತೆಗೆದು ಬಟ್ಟಲಿನಂತೆ ಹಳ್ಳಮಾಡಿ ಹೂರಣ ತುಂಬಿ ಅದೇ ಹಿಟ್ಟಿನಿಂದ ಮುಚ್ಚಿ ಲಟ್ಟಿಸಿ
- ಕಾದ ಕಾವಲಿಯ ಮೇಲೆ ತುಪ್ಪ ಬಳಸಿ ಸುಡುವುದು.
- ಬಿಸಿಬಿಸಿ ಇದ್ದಾಗಲೇ ಹಾಲು ತುಪ್ಪದೊಡನೆ ತಿನ್ನಲು ಕೊಡಿ

ಇನ್ನೂ ನೂರಾರು ರೆಸಿಪ್ಪಿಗಳಿಗೆ **www.sugamakannada.com** ಗೆ ಭೇಟಿಕೊಡಿ.

ರೆಸಿಪಿ ಕೊಡ್ತೀರಾ!

ಇದೇನ್ಲಾ ಇದು

೧. ತಣ್ಣೀರಾದ್ರೆ ತೇಲಾಡತ್ತೆ, ಬಿಸಿನೀರಾದ್ರೆ ಮಾಯವಾಗತ್ತೆ

೨. ಅಣ್ಣನ ಮನೆ ದೀಪದಿಂದ ತಮ್ಮನ ಮನೆಯಲ್ಲಿ ಬೆಳಕು

ಉತ್ತರಕ್ಕೆ ಪುಟ ೮ ನೋಡಿ

ನೀವೂ ಜಾಹೀರಾತು ನೀಡಲು ಬಯಸುವಿರಾದರೆ ನಮಗೆ ಇ-ಮೇಲ್ ಮಾಡಿ: **horanadachilume@gmail.com**

Contact Mr Sudheendra Rao EMAIL
Mobile 0415 291 723

Contact Mr.Sathya Bhat EMAIL
Mobile 0412 918 511

Contact Mr Umesh EMAIL
Mobile 0401 034 456

Contact Mr Eranna Gotyal EMAIL
Mobile 0404 215 605

ಕನ್ಯಾದಾನ ...

ಅತ್ತು ಇಳೆಗೆ ಬಂದು ಅಪ್ಪಿದಾಗ |
ಸ್ವತ್ತು ನಮ್ಮದೆಂದು ತಪ್ಪು ತಿಳಿದು |
ಎತ್ತಿ ಆಡಿಸುತ್ತ ಸುತ್ತಲೆಲ್ಲ ತೋರಿಸುತ್ತ |
ಎತ್ತರದ ಜ್ಞಾನಕ್ಕೆ ಹತ್ತಿಸುತ್ತ |
ಎತ್ತ ಹೊದರತ್ತ ಬೆನ್ನಹತ್ತಿ ಕಾಯುತ್ತ |
ಮುತ್ತನಿಟ್ಟು ಅಪ್ಪಿಕೊಂಡು ಸಾಕಿಹೆವು |
ಮುತ್ತಿನಂಥ ನಮ್ಮ ಮಗಳ |
ಇತ್ತು ನಿಮ್ಮ ಕೈಲಿ | ಮುಗಿದು ನಮ್ಮ ಕೈಯ |
ಅತ್ತು ಬೇಡುವೆವು | ತಪ್ಪನೆಲ್ಲ ಅತ್ತ ಇರಿಸಿ |
ಎತ್ತಿಕೊಳ್ಳಿ ಸುತ್ತಬಳಸಿ |ಕುವರಿ ನಿಮ್ಮದೆಂದುಕೊಳ್ಳಿ|

ರಚನೆ: ಮಾಸ್ಟರ್ ಹಿರಣ್ಣಯ್ಯ

ಅವಿರತ ...

ಕಡಲ ತಡಿಗೆ ಹೊಡೆದು ಹೊಡೆದು
ಮೊರೆಯುತಿರುವ ಅಲೆಗಳು;

ಸುಡುವ ಮುಖದ ಸೂರ್ಯ ಅಲ್ಲೇ
ಕಳೆದಿಹ ಹಲ ಯುಗಗಳು;

ಬಿಡದೆ ಬೆಸ್ತ ಬೀಸಿ ಎಸೆದ ಮೀನ
ಹಿಡಿವ ಬಲೆಗಳು;

ರಚನೆ: ಮಾಲು, ಅಡಿಲೈಡ್

ಹಾಸ್ಯ ಚಿಲುಮೆ



ತಿಮ್ಮ : ಊರಲ್ಲಿ ರಜದಲ್ಲಿ ಏನು ಮಾಡ್ತಿದ್ದೆ?

ಗುಂಡ:ನಮ್ಮಪ್ಪಂಗೆ ಸಹಾಯ ಮಾಡ್ತಿದ್ದ

ತಿಮ್ಮ: ನಿಮ್ಮಪ್ಪ ಏನ್ ಮಾಡ್ತಿದ್ರು?

ಗುಂಡ:ಏನೂ ಕೆಲಸ ಇರೋಲ್ಲ ಸುಮ್ಮನೆ ಇರ್ತಿದ್ರು..

ನ್ಯಾಯಾಧೀಶ: ಈತನಿಗೆ ಎರಡೂ ಕಿವಿಗಳನ್ನು ಕತ್ತರಿಸಿ

ಗುಂಡ:ಅಯ್ಯೋ ಬೇಡಾ ಸ್ವಾಮಿ ನಾನು ಕುರುಡ ಆಗೋಗ್ತೀನಿ

ನ್ಯಾಯಾಧೀಶ:ಮೂರ್ಖ ಕಿವಿ ಕತ್ತರಿಸಿದರೆ ಕುರುಡು ಹೇಗೆ ಆಗ್ತಾರೆ?

ಗುಂಡ:ಆಮೇಲೆ ಕನ್ನಡಕ ಎಲ್ಲಿ ಹಾಕಲಿ?

ಜಾಣ ಕರ್ನಾಟಕ

೧. ಕರ್ನಾಟಕದ ಅತ್ಯಂತ ಉದ್ದದ ನದಿ ಯಾವುದು? ಇದಕ್ಕೆ ಅಡ್ಡಲಾಗಿ ಕಟ್ಟಿರುವ ಪ್ರಮುಖ ಅಣೆಕಟ್ಟು ಯಾವುದು?

೨. ಮಾರಿಕಣಿವೆ ಜಲಾಶಯ ಯಾವ ನದಿಗೆ ಅಡ್ಡಲಾಗಿ ಕಟ್ಟಲಾಗಿದೆ? ಈ ಅಣೆಕಟ್ಟೆಗೆ ಇರುವ ಮತ್ತೊಂದು ಹೆಸರು ಏನು?

ಸರಿ ಉತ್ತರಕ್ಕೆ ಪುಟ ೧೪ ನೋಡಿ

ಮತ್ತಷ್ಟು ಹಾಸ್ಯಕ್ಕೆ ಭೇಟಿ ಕೊಡಿ – ಸುಗಮ ಕನ್ನಡ ಕೂಟ

ಇದೇನ್ಲಾ ಇದು – ಉತ್ತರ

೧. ಬೆಣ್ಣೆ ೨. ಸೂರ್ಯ ಚಂದ್ರ

ಭಾಷೆಯ ಹಿರಿಮೆ

ಲೇಖಕರು: ಸ್ಮಿತಾ ಮೇಲ್ಕೋಟೆ

ಹೊರನಾಡ ಚಿಲುಮೆ ಪತ್ರಿಕೆ ನಮ್ಮ ಮಾತೃ ಭಾಷೆ ಕನ್ನಡವನ್ನು ಪರನಾಡಿನಲ್ಲಿಯೂ ಕೂಡ ಮನೆ ಮಾತಾಗಿಸುತ್ತಿದೆ. ನನ್ನ ಅಚ್ಚುಮೆಚ್ಚಿನ ಭಾಷೆಯ ಪತ್ರಿಕೆ ಓದೋದಂತು ನನಗೆ ಇನ್ನಿಲ್ಲದ ಹುಮ್ಮಸ್ಸು ತರುತ್ತದೆ. ಭಾಷೆ, ನಮ್ಮನ್ನು ಸಮಾಜದಲ್ಲಿ ಎಷ್ಟು ಸರಾಗವಾಗಿ ಬೇರೆಯುವಂತೆ ಮಾಡುತ್ತದೆ ಎಂದರೆ, ಕೇವಲ ಮೂಕ ಭಾಷೆಯನ್ನು ಒಮ್ಮೆ ಊಹಿಸಿಕೊಂಡು ನೋಡಿ! ಭಾರತದ ಮಟ್ಟಿಗೆ ಹೇಳುವುದಾದರೆ ಆ ದೇಶ ಹಲವು ಭಾಷೆಗಳ ರತ್ನ ಭಂಡಾರ. ಅಂತಹ ಭಾಷೆಗಳ ಬಗ್ಗೆ ಒಂದು ಚಿಕ್ಕ ಕಿರುನೋಟ ಬೀರೋಣವೇ ?

ಭಾಷೆಯ ಮೂಲ ಉದ್ದೇಶ ಅಥವಾ ಧ್ಯೇಯ ಏನು? ನಾವು ಜನಗಳ ಜೊತೆ ನಿರಂತರ ಸಂಪರ್ಕ, ಪರಸ್ಪರ ಅನಿಸಿಕೆಗಳನ್ನು ಮತ್ತು ಭಾವನೆಗಳನ್ನು ಹಂಚಿಕೊಳ್ಳುವ ಏಕಮಾತ್ರ ಮಾಧ್ಯಮ. ಪ್ರಪಂಚದಲ್ಲಿ ಸುಮಾರು ಆರು ಸಾವಿರದಿಂದ ಏಳು ಸಾವಿರ ಭಾಷೆಗಳು ಚಾಲ್ತಿಯಲ್ಲಿವೆ. ನಮ್ಮ ಭಾರತದಲ್ಲೇ ೧೫೦೦ ಕ್ಕೂ ಹೆಚ್ಚು ಭಾಷೆಗಳು ಇವೆ ಎಂದು ಅಂಕಿ ಅಂಶಗಳ ಪ್ರಕಾರ ಸಾಬೀತಾಗಿದೆ.

ಒಂದು ಭಾಷೆಯಲ್ಲಿ ಬೇರೆ ಬೇರೆ ಭಾಷೆಗಳಿಂದ ಆಮದು ಮಾಡಿದ ಪದಗಳಿರಬಹುದು. ಅದು ಭಾಷೆಯ ಬೆಳವಣಿಗೆಗೂ ಸಹಕಾರಿ. ಪ್ರತಿಯೊಂದು ಭಾಷೆಗೂ ಸಾಮಾನ್ಯವಾಗಿ ಅದರದೇ ಆದ ಲಿಪಿ ಇರುತ್ತದೆ. ಬಹುತೇಕ ಸಮಯ ಮಾತಿನಲ್ಲಿ ಭಾಷೆಯನ್ನು ಉಪಯೋಗಿಸಿದರೂ, ಧಾಖಲಿಸಲು, ಕಲಿಸಲು, ಮತ್ತೊಮ್ಮೆ ಅವಲೋಕಿಸಲು ಈ ಲಿಪಿ ಅನುಕೂಲ ಮಾಡಿಕೊಡುತ್ತದೆ.

ಚಿಕ್ಕಂದಿನಲ್ಲಿ, ಮನೆಯಲ್ಲಿ ಅಮ್ಮ ಹೇಳಿಕೊಟ್ಟ ಭಾಷೆ , ಅದು ನಮ್ಮ ಮಾತೃಭಾಷೆ. ಮಾತೃ ಭಾಷೆಯಲ್ಲಿ ಯಾರೊಡನೆ ಸಂಭಾಷಿಸಿದರೂ ಅದಕ್ಕೊಂದು ವಿಶೇಷ ಸ್ಥಾನ. ಆಹಾ! ಕೇಳಲದೆಷ್ಟು ಇಂಪು. ಸವಿಜೇನು ಸವಿದಂತೆ. ಹೊರಗೆಲ್ಲಿ ಪ್ರಯಾಣಿಸಿದರೂ ನಮ್ಮ ಭಾಷೆಯವರು ಸಿಕ್ಕಾಗ ಆಗುವ ಸಂತೋಷ ವರ್ಣಿಸಲು ಪದಗಳು ಸಾಲದು. ಸರಾಗವಾಗಿ ಮನಸ್ಸು ಬಿಚ್ಚಿ ಮಾತಾಡಬಹುದು ಎಂಬುದೇ ಮಾತೃ ಭಾಷೆಗೆ ಇರುವು ಬಹು ದೊಡ್ಡ ಹಿರಿಮೆ. ಆಗಿಂದ್ದಾಗ್ಗೆ ಪರಭಾಷಿಕರ ಜೊತೆ ಮಾತಾಡಬೇಕೆಂದರೆ , ಸಾಮಾನ್ಯವಾಗಿ ಚಾಲ್ತಿಯಲ್ಲಿರುವ ಇಂಗ್ಲಿಷ್ ಅಥವಾ ಹಿಂದಿ ಭಾಷೆ ಬಳಸುತ್ತೇವೆ. ಕಛೇರಿಗಳಲ್ಲಂತೂ ಆಂಗ್ಲ ಭಾಷೆಯೇ ಕಾಯಂ ಆಗಿದೆ. ಭಾಷೆ ಯಾವುದಾದರೇನು ಸಂಬಂಧ ಮುಖ್ಯ ಅಂತ ಕೆಲವೊಮ್ಮೆ ಅತಿ ಪ್ರಿಯವಲ್ಲದ ಭಾಷೇನೂ ಉಲಿಯಬೇಕಾಗುತ್ತದೆ.

ದೇವ ಭಾಷೆಯಾದ ಸಂಸ್ಕೃತಕ್ಕೆ ವಿಶೇಷ ಸ್ಥಾನವಿದೆ. ಇದರ ಉಚ್ಚಾರ ನಮ್ಮ ನರ ನಾಡಿಗಳಲ್ಲಿ ಶಕ್ತಿಯನ್ನು ತುಂಬುತ್ತದೆ. ಮಾತನಾಡುವಾಗ ಧ್ವನಿಯಲ್ಲಿ ಆಗುವ ಏರು ತಗ್ಗುಗಳು ನಮ್ಮ ಉಸಿರನ್ನು ಭಾವನೆಗಳನ್ನು ಹತೋಟಿಯಲ್ಲಿ ಕೂಡ ಇಡುತ್ತದೆ ಎಂದು ವಿಜ್ಞಾನ ಹೇಳುತ್ತದೆ. ಅದರಿಂದ ಬಹುತೇಕ ಮಂತ್ರಗಳು ಸಂಸ್ಕೃತದಲ್ಲಿವೆ. ಕರ್ನಾಟಕದಲ್ಲಿ , ಮತ್ತೂರ್ ಎಂಬ ಹಳ್ಳಿಯಲ್ಲಿ ವೈದ್ಯನಿಂದ ಹಿಡಿದು ರೈತರು , ವ್ಯಾಪಾರಿಗಳು ಕೂಡ ದಿನ ನಿತ್ಯ ಸಂಸ್ಕೃತವನ್ನು ಬಳಸುತ್ತಾರೆ.

ಪರಭಾಷೆ ಮಾತನಾಡುವ ನೆರೆಹೊರೆಯವರು ಇದ್ದಾಗ, ಅವರೊಡನೆ ಮಾತಾಡುತ್ತಾ ಅವರ ಭಾಷೆಯ ಎಷ್ಟೋ ಪದಗಳು ನಮ್ಮ ಕಿವಿಯ ಮೇಲೂ ಬಿದ್ದು ಮನದಟ್ಟು ಆಗಿರುತ್ತದೆ. ನಮ್ಮ ಭಾಷೆಯನ್ನು ಕೂಡ ಅವರಿಗೆ ಸ್ವಲ್ಪವಾದರೂ ಅರ್ಥ ಮಾಡಿಸಿರುತ್ತೇವೆ. ಹೀಗೆ ಭಾಷೆಗಳ ವಿನಿಮಯ ಸಾಗುತ್ತದೆ.

ಇನ್ನು ಮೂಕರು ಮತ್ತು ಕಿವುಡರು ಉಪಯೋಗಿಸುವ ಸನ್ನೆಯ ಭಾಷೆ ತಳ್ಳಿ ಹಾಕುವಂತಿಲ್ಲ. ನೋಡಿದವರು ಮೂಕ ವಿಸ್ಮಿತರಾಗುತ್ತಾರೆ. ನಾವು ಶಬ್ದದಿಂದ ಎಷ್ಟು ವೇಗವಾಗಿ ಸಂಭಾಷಿಸುತ್ತೇವೆಯೋ ಅಷ್ಟೇ ವೇಗವಾಗಿ ಸನ್ನೆಯ ಮೂಲಕ ಅವರು ಸಂಭಾಷಣೆಯಲ್ಲಿ ತೊಡಗಿರುತ್ತಾರೆ. ಹಾಗೆಯೇ ಅಂಧರಿಗಾಗಿ ಬ್ರೈಲ್ ಭಾಷೆ ಕೂಡ. ಈ ಭಾಷೆಯಲ್ಲಿ ಓದಿ ಡಿಗ್ರೀ ಪಡೆದವರು ಬೇಕಾದಷ್ಟು ಜನ ಇದ್ದಾರೆ.

ನಾವು ಮನಸ್ಸಿನಲ್ಲಿ ಯೋಚಿಸುವಾಗ ಯಾವ ಭಾಷೆ ಬಳಸುತ್ತೇವೆ? ಸಾಮಾನ್ಯವಾಗಿ ಅದು ನಮ್ಮ ಮಾತೃಭಾಷೆಯೇ ಆಗಿರುತ್ತದೆ. ಬೇಕಾದರೆ ಪ್ರಯತ್ನಿಸಿ ನೋಡಿ. ಏನಾದರೂ ಎಣಿಸುವಾಗ "ಒಂದು ಎರಡು ಮೂರು..." ಎಂದೋ, ಅಥವಾ ಹೊಸ ಜಾಗಕ್ಕೆ ಹೋಗುವಾಗ ಅದರ ದಾರಿಯನ್ನು "ಒಹ್ ಸೀದಾ ಹೋಗಿ ಬಲಗಡೆ ತಿರ್ಗಿ ಒಂದ್ ದೊಡ್ಡ ರೋಡ್ ದಾಟಿ ... " ಎಂದೋ ಯೋಚಿಸುತ್ತೀವಿ. ನಂತರವಷ್ಟೇ ಬಾಯಿಂದ ತರ್ಜುಮೆ ಆಗಿ ಬೇಕಾದ ಭಾಷೆ ಹೊರಬರುವುದು.

ಮತ್ತಷ್ಟು ಸಂದರ್ಭಗಳಲ್ಲಿ ಆ ಸಮಯಕ್ಕೆ ತಕ್ಕ ಭಾಷೆ. ಉದಾ: ಹುಟ್ಟಿದ ಎಳೆ ಮಗುವಿಗೆ ಯಾವ ಭಾಷೆ ? ಅಮ್ಮ ಅರ್ಥ ಮಾಡಿಕೊಳ್ಳುವ ಮಗುವಿನ ಭಾಷೆ. ಇನ್ನು ಕಣ್ಣುಗಳಲ್ಲಿಯೇ ಮಾತಾಡಿಕೊಳ್ಳುವ ಪ್ರೇಮಿಗಳ ಭಾಷೆ ... ಬಲು ಮಧುರ, ರೋಮಾಂಚಕ!

ಪ್ರಪಂಚದಲ್ಲಿ ತಾಂತ್ರಿಕತೆ ಮುಂದುವರಿದ ಹಾಗೆಲ್ಲಾ ಸೋಶಿಯಲ್ ಮೀಡಿಯಾದಲ್ಲಿ ನಮ್ಮ ಭಾವನೆಗಳನ್ನು ಚಿತ್ರಗಳ ಮೂಲಕ ತಿಳಿಯಪಡಿಸುತ್ತಿದ್ದೇವೆ. ಅದೇ ಈಗ ಹೊಸ ಭಾಷೆಯಾಗಿ ಮಾರ್ಪಾಡಾಗಿದೆ. ಅನುಕೂಲಕ್ಕೆ ತಕ್ಕ ಹಾಗೆ ಭಾಷೆಗಳು ಹುಟ್ಟಿಕೊಳ್ಳುತ್ತವೆ .

ಇಷ್ಟೊಂದು ರೀತಿಯ ಭಾಷೆಗಳಿದ್ದಾಗ ಯಾವುದು ಹೆಚ್ಚು ಯಾವುದು ಕಡಿಮೆ ಎಂದು ಹೇಳಲಾಗುವುದೇ? ಒಂದಕ್ಕಿಂತ ಇನ್ನೊಂದು ವಿಭಿನ್ನ. ಅದೇನೇ ಇರಲಿ, ನಮ್ಮ ಮಾತೃ ಭಾಷೆ ಕನ್ನಡ ಇನ್ನಷ್ಟು ಪ್ರಚಲಿತವಾಗಬೇಕು. ನಮ್ಮ ಅಚ್ಚು ಮೆಚ್ಚಿನ ಕನ್ನಡವನ್ನು ಉಸಿರಾಗಿಸಿಕೊಂಡು ಮಿಕ್ಕೆಲ್ಲ ಭಾಷೆಯನ್ನು ಸಹೃದಯತೆಯಿಂದ ಗೌರವಿಸೋಣ. ▪

ಬ್ಲಾಗ್ ಲೋಕ

ಓದಲು ಚಿತ್ರದ ಕೆಳಗಿರುವ ಲಿಂಕ್ ಕ್ಲಿಕ್ ಮಾಡಿ

ಕನಕಾಪುರ ನಾರಾಯಣ
ಇವರ "ಚಕ್ಕೆ ಮೊಗ್ಗು"

ಸುದರ್ಶನ್. ಏನ್
ಇವರ "ಅನಿವಾಸಿ"

ಬದರಿ ತ್ಯಾಮಗೊಂಡ್ಲು
ಇವರ "ಕಾವ್ಯ ಕಸ್ತೂರಿ"

ಸ್ಮಿತಾ ಮೇಲ್ಕೋಟೆ
ಇವರ "ಮಂದಹಾಸ"

ಕನ್ನಡದಲ್ಲಿ ಟೈಪ್ ಮಾಡಲು ಹಲವಾರು ಸಾಧನಗಳಿವೆ, ವಿಧಾನಗಳಿವೆ. (ಬರಹ, ನುಡಿ ಇತ್ಯಾದಿಯನ್ನು ನೀವು ಕರಗತ ಮಾಡಿಕೊಂಡಿರುತ್ತೀರಷ್ಟೇ) ಆದರೆ ಈ ತಂತ್ರಾಂಶಗಳನ್ನು ಅದರೊಡನೆ ಬಂದ fonts ಉಪಯೋಗಿಸಿಯೇ ಸಾಮಾನ್ಯವಾಗಿ ಟೈಪ್ ಮಾಡುವುದು. ಅದೇ ಈ font ರಗಳೆ ಇಲ್ಲದೆ ನಾವು ಟೈಪ್ ಮಾಡಿದ್ದು ಎಲ್ಲರೂ ಓದುವ ಹಾಗಿದ್ದರೆ ಚೆನ್ನ ಅಲ್ಲವೇ. ಅಂತಹ ಒಂದು ಸಿದ್ಧತೆ ಯೂನಿಕೋಡ್ ಆಧಾರಿತ ತಂತ್ರಜ್ಞಾನದಿಂದ ಸಾಧ್ಯ.
ಅಂತಹ ಒಂದು ತಂತ್ರಾಂಶ "Google Input Tools". ಇದನ್ನು install ಮಾಡಿ ಉಪಯೋಗಿಸುವ ವಿಧಾನ ತಿಳಿಸುವ ಉದ್ದೇಶ ಈ ಲೇಖನದ್ದು.

ಗೂಗಲ್ ಇನ್ಪುಟ್ ಟೂಲ್ಸ್ (Google input tools) ಯೂನಿಕೋಡ್ ಆಧಾರಿತ ಒಂದ ತಂತ್ರಾಂಶ. ಇದನ್ನು ನಿಮ್ಮ ಕಂಪ್ಯೂಟರ್ ನಲ್ಲಿ install ಮಾಡಿದರೆ ಕನ್ನಡದಲ್ಲಿ ನೀವು ನೇರವಾಗಿ word, excel ಇತ್ಯಾದಿ office ಸಾಫ್ಟ್ವೇರ್ ಅಲ್ಲದೆ, ಸಮಾಜ ತಾಣಗಳಾದ ಫೇಸ್ಬುಕ್ , ಜಿ-ಪ್ಲಸ್ ಇತ್ಯಾದಿಗಳಲ್ಲೂ ಟೈಪ್ ಮಾಡಬಹುದು.

INSTALL ಮಾಡುವ ವಿಧಾನ

1. http://www.google.com/inputtools/windows/index.html - ಈ ಲಿಂಕ್ ಕ್ಲಿಕ್ ಮಾಡಿ
2. ಇರುವ ಹಲವಾರು ಭಾಷೆಗಳ ಲಿಸ್ಟ್ ನಲ್ಲಿ ಕನ್ನಡ ಕ್ಲಿಕ್ ಮಾಡಿ (ಬೇರೆ ಭಾಷೆಗಳು ಬೇಕಿದ್ದರೆ ಅವನ್ನು ಕ್ಲಿಕ್ ಮಾಡಿ)



3. ನಂತರ, (I agree to the Google Terms of Service and Privacy Policy.) ಕ್ಲಿಕ್ ಮಾಡಿ, Download ಬಟನ್ ಕ್ಲಿಕ್ ಮಾಡಿ.
4. ಬರುವ dialog box ನಲ್ಲಿ "save file" ಕ್ಲಿಕ್ ಮಾಡಿ



ಇದು ಸಾಮಾನ್ಯವಾಗಿ ನಿಮ್ಮ ಕಂಪ್ಯೂಟರ್ ನ \downloads folder ನಲ್ಲಿ save ಆಗುತ್ತೆ.

5. ಅಲ್ಲಿಗೆ ಹೋಗಿ 

ಎನ್ನುವ file ಮೇಲೆ ಡಬಲ್ ಕ್ಲಿಕ್ ಮಾಡಿ
6. ನಂತರ ಇನ್ನಿತರ ಸಾಫ್ಟ್ವೇರ್ ಹೇಗೆ install ಮಾಡುತ್ತೀರೋ ಹಾಗೆ install ಮಾಡಿ
(Click on Run button and click "Yes" if it promts)
7. ಎಲ್ಲ ಸರಿಯಾಗಿ ಮಾಡಿದರೆ "Google Input Tools Successfully Installed" ಎಂಬ ಮೆಸೇಜ್ ಬರುತ್ತದೆ.
8. ಇದಾದ ಮೇಲೆ ನಿಮ್ಮ ಟಾಸ್ಕ್ ಬಾರ್ ಬಲ ಬದಿಯಲ್ಲಿ ಈ ಕೆಳಗೆ ತೋರಿಸಿರುವಂತೆ ಒಂದು ಪುಟ್ಟ ಬಾಕ್ಸ್ ಕಾಣುತ್ತೆ

ಇಲ್ಲಿಂದ ಕನ್ನಡದಲ್ಲಿ ಟೈಪ್ ಮಾಡುವ ನಿಮ್ಮ ಕೆಲಸ ಸುಲಭ.

ಮುಂದಿನ ಪುಟ ನೋಡಿ

ಕಂಪ್ಯೂಟರ್ ನಲ್ಲಿ ಕನ್ನಡದಲ್ಲಿ ಟೈಪಿಂಗ್ - ಮುಂದುವರೆದ ಭಾಗ

- ಯಾವಾಗ ಕನ್ನಡದಲ್ಲಿ ಟೈಪ್ ಮಾಡಬೇಕೋ ಆಗ ಈ ಬಾಕ್ಸ್ ನಲ್ಲಿ "ಕ" ಇದೆ ಎಂದು ಖಚಿತಪಡಿಸಿಕೊಳ್ಳಿ. ಒಂದು ವೇಳೆ "ಕ" ಬದಲು ಬೇರೆ ಭಾಷೆಯ ಅಕ್ಷರ ಇದ್ದರೆ, ಆ ಅಕ್ಷರದ ಮೇಲೆ ಕ್ಲಿಕ್ ಮಾಡಿದರೆ ನಿಮ್ಮ ಕಂಪ್ಯೂಟರ್ ನಲ್ಲಿ install ಆಗಿರೋ ಎಲ್ಲಾ ಭಾಷೆಯ ಲಿಸ್ಟ್ ತೋರಿಸುತ್ತದೆ. ಅದರಿಂದ Kannada ಅನ್ನುವುದರ ಮೇಲೆ ಕ್ಲಿಕ್ ಮಾಡಿ.

.
- ಕ್ಲಿಕ್ ಮಾಡುವ ಬದಲು ಕೀ ಬೋರ್ಡ್ ಶಾರ್ಟ್ ಕಟ್ ಕೂಡ ಬಳಸಬಹುದು.
  ಉದಾ: ಆಂಗ್ಲ ಭಾಷೆಯಲ್ಲಿ ಟೈಪ್ ಮಾಡುತ್ತಿದ್ದಾಗ ಕನ್ನಡ ಟೈಪ್ ಮಾಡಲು ಒಟ್ಟಿಗೆ CTRL + G ಕೀ ಒತ್ತಿ. ಆಗ ಆಂಗ್ಲದಿಂದ ಕನ್ನಡಕ್ಕೆ ಕೀಲಿಮಣೆ ಸಿದ್ಧವಾಗುತ್ತದೆ. ನಂತರ ನೀವು ಮತ್ತೆ ಆಂಗ್ಲ ಪದ ಬಳಸಬೇಕಾದರೆ ಮತ್ತೆ CTRL + G ಕೀ ಒಟ್ಟಿಗೆ ಒತ್ತಿ.

  ಸೂಚನೆ: ಕೆಲವೊಮ್ಮೆ ಈ ಬಾಕ್ಸ್ ಕಾಣಿಸದಿದ್ದರೆ ಒಟ್ಟಿಗೆ ALT + SHIFT ಕೀ ಒತ್ತಿ
- ಹೀಗೆ ಕನ್ನಡ ಮತ್ತು ಇತರ installed ಭಾಷೆಗಳನ್ನು ಸುಲಭವಾಗಿ ಎಲ್ಲಿ ಬೇಕೆಂದರಲ್ಲಿ ಟೈಪ್ ಮಾಡಬಹುದು.



- ಈ ತಂತ್ರಾಂಶದ ಇನ್ನೊಂದು ಹಿರಿಮೆ ಎಂದರೆ ನಾವು ಟೈಪ್ ಮಾಡುತ್ತಿದ್ದಂತೆ ಆ ಶಬ್ದ ಏನಿರಬಹುದು ಎಂದು ಊಹಿಸಿ ಸೂಚಿಸುತ್ತದೆ.
- ಇದನ್ನು ನೀವೆಲ್ಲಾ install ಮಾಡಿ ಉಪಯೋಗಿಸಿ. ಏನಾದರು ಪ್ರಶ್ನೆಗಳಿದ್ದರೆ horanadachilume@gmail.com ಗೆ ಇಮೇಲ್ ಮಾಡಿ.

UNICODE ಎಂದರೇನು

ಇದೊಂದು ಅಕ್ಷರಗಳ ಶಿಷ್ಟಪದ್ಧತಿ (protocol ಅನ್ನಬಹುದು).

ಹೆಚ್ಚಿನ ಮಾಹಿತಿಗೆ ಭೇಟಿ ಕೊಡಿ (http://en.wikipedia.org/wiki/Unicode)

ಜಗತ್ತಿನ ನೂರಾರು ಭಾಷೆಯ ಅಕ್ಷರಗಳನ್ನು ಇದೊಂದೇ ನಮೂನೆಯಲ್ಲಿ ಬರೆಯಬಹುದು ಹಾಗೂ ಓದಬಹುದು. ಇದರಿಂದಾಗಿ, ಬೇರೆ ಬೇರೆ ಭಾಷೆಯವರು ಬೇರೆ ಬೇರೆ ಭಾಷೆಯ ಫಾಂಟುಗಳನ್ನು ಸಿಕ್ಕ ಸಿಕ್ಕ ಕಂಪ್ಯೂಟರಿನಲ್ಲೆಲ್ಲಾ Install ಮಾಡಿಕೊಳ್ಳಬೇಕೆಂಬ ತಾಪತ್ರಯವಿಲ್ಲ. ಕಂಪ್ಯೂಟರಿನಲ್ಲಿ ಯೂನಿಕೋಡ್ ಹಾಗೂ ಸ್ಥಳೀಯ ಭಾಷೆಯನ್ನು Enable ಮಾಡಿದರೆ ಸಾಕು.

ನಿಮ್ಮ ಕಂಪ್ಯೂಟರಿನಲ್ಲಿ Windows 7/8 ಅಥವಾ Windows 2003 ಅಥವಾ XP ಇದ್ದರೆ, ಸಾಮಾನ್ಯವಾಗಿ ಕನ್ನಡ ಯೂನಿಕೋಡ್ ಅಕ್ಷರಗಳು ಕಾಣಿಸುತ್ತವೆ .ಯೂನಿಕೋಡ್ ಅಕ್ಷರಗಳಿದ್ದ ಜಾಗದಲ್ಲಿ □□□□ ಅಥವಾ ???? ಕಾಣಿಸಿದರೆ, ಆ ಸಾಫ್ಟ್ ವೇರ್ ಅಥವಾ ಬ್ರೌಸರ್ ಯೂನಿಕೋಡ್ ಅಕ್ಷರಗಳನ್ನು ಬೆಂಬಲಿಸುತ್ತಿಲ್ಲ ಎಂದು ಅರ್ಥ .ಉದಾ: Windows 95 ಹಾಗೂ 98, ಕನ್ನಡ ಯೂನಿಕೋಡನ್ನು ಬೆಂಬಲಿಸುವುದಿಲ್ಲ.▪

ಕನ್ನಡ ಟೈಪಿಂಗ್ ಸ್ಮರಣೀಯರು – ಕೆ.ಪಿ. ರಾವ್



ತಂತ್ರಾಂಶದಲ್ಲಿ ಭಾರತೀಯ ಭಾಷೆಯನ್ನು ಪ್ರೋತ್ಸಾಹಿಸಬೇಕು ಎಂದು ಪಣತೊಟ್ಟು ಮಾಡಿ ತೋರಿಸಿದವರಲ್ಲಿ "ನಾಡೋಜ ಪ್ರೊ॥ ಕೆ. ಪಿ. ರಾವ್" ಮೊದಲಿಗರು. "ಇ" ಪ್ರೋಗ್ರಾಮಿಂಗ್ ನಲ್ಲಿ ಇವರು ರಚಿಸಿದ "ಸೇಡಿಯಾಪು" ಎಂಬ ತಂತ್ರಾಂಶ ಕೇವಲ 72 ಘಂಟೆಗಳಲ್ಲಿ ಸಿದ್ಧಪಡಿಸಿದ್ದು! ಇದು ಕನ್ನಡವನ್ನು ಕಂಪ್ಯೂಟರ್ ಪರದೆಯ ಮೇಲೆ ಮೂಡಿಸಿದ ಸಾಫ್ಟ್ವೇರ್ ಗಳಲ್ಲಿ ಪ್ರಪ್ರಥಮ. ತಮ್ಮ ಗುರುಗಳ ನೆನಪಿಗಾಗಿ "ಸೇಡಿಯಾಪು" ಎಂದು ಹೆಸರಿಟ್ಟರು.▪

ಪದ-ಪುಂಜ (ಶಾನೆ ತಲೆ ಕೆಡಿಸ್ಕೋಬೇಡಿ)

ನ	ಜ	ಗ
ರು	**ಕ**	ಸಂ
ತಿ	ಡ	ನಾ

ಏನ್ ರೂಲ್ಸು ?

ಮೇಲಿನ ಒಂಭತ್ತು ಅಕ್ಷರಗಳನ್ನು ಉಪಯೋಗಿಸಿ 2 ರಿಂದ 9 ಅಕ್ಷರಗಳಿರುವ ಪದಗಳನ್ನು ರಚಿಸಿ.

- ಮೂರಕ್ಕಿಂತ ಹೆಚ್ಚಿನ ಅಕ್ಷರ ಇರುವ ಪದಗಳು ಸಂಯುಕ್ತ ಪದಗಳಿರಬಹುದು
- ಮಧ್ಯದ ಅಕ್ಷರ "**ಕ**" ವನ್ನು ಒಳಗೊಂಡ ಕನಿಷ್ಠ 10 ಪದಗಳು ಇರಲೇಬೇಕು.
- ಒಂದು ಅಕ್ಷರವನ್ನು ಒಂದು ಪದದಲ್ಲಿ ಒಂದೇ ಸಲ ಬಳಸಬೇಕು
- 10 ಸಾಧಾರಣ, 15 ಉತ್ತಮ, 20+ ಅತ್ಯುತ್ತಮ

ನಿಮ್ಮ ಉತ್ತರ ಈಮೈಲ್ ಮಾಡಿ, (horanadachilume@gmail.com)

20 ಕ್ಕೂ ಹೆಚ್ಚು ಪದಗಳನ್ನು ರಚಿಸಿದವರ ಹೆಸರನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು.

ಸೆಪ್ಟೆಂಬರ್ 25 ತಮ್ಮ ಉತ್ತರ ಕಳುಹಿಸಲು ಕಡೆಯ ದಿನಾಂಕ.

ಆಗಸ್ಟ್ ಪದ ಪುಂಜ – ಉತ್ತರ

ಕಳೆದ ತಿಂಗಳ ಪದ ಪುಂಜಕ್ಕೆ ಉತ್ತರಿಸಿದ ಅನೇಕ ಜನರಿಗೆ ನಮ್ಮ ಧನ್ಯವಾದಗಳು. ಅವರ ಪೈಕಿ ೨೦ಕ್ಕೂ ಹೆಚ್ಚು ಪದಗಳನ್ನ ಕಳುಹಿಸಿರುವ ಇವರಿಗೆ ನಮ್ಮ ಅಭಿನಂದನೆಗಳು.

- ಸುಮಾ ಅಶೋಕ್, ಸಿಡ್ನಿ
- ಸ್ಮಿತಾ ಮೇಲ್ಕೋಟೆ, ಸಿಡ್ನಿ
- ನಳಿನಾ ವೆಂಕಟನಾಗ್, ಮೆಲ್ಬೋರ್ನ್
- ನಾಗಶೈಲ ಕುಮಾರ್, ಸಿಡ್ನಿ
- ರಾಘವೇಂದ್ರ ಕೃಷ್ಣಮೂರ್ತಿ, ಮೆಲ್ಬೋರ್ನ್

ಆಗಸ್ಟ್ ತಿಂಗಳ ಪದಪುಂಜ

ಅ	ನ	ಕಾ
ದ	ರ	ಲ್ಲ
ಹಂ	ವಿ	ಜ

ಮೂಡಬಹುದಾದ ಹಲವು ಪದಗಳು:

ಜನರ, ಅರ, ಅವಿಕಾರ, ಅರವಿಲ್ಲ, ಅದರ, ನರ, ನರವಿಲ್ಲದ, ನವಿರಲ್ಲದ, ಜನರಲ್ಲ, ಜನವಿರಲ್ಲ, ಜನರಕಾವಿ, ಕಾದಜನರಲ್ಲ, ಕಾವಿರದ, ವಿಕಾರ, ರವಿ, ರಜ, ದರ, ಕಾಜವಿರದ, ಕಾರವಿಲ್ಲ, ಕಾವಿರಲ್ಲ, ಕಾದರಲ್ಲ, ನರವಿಲ್ಲ, ವಿಕಾರಜನ, ರವಿದಲ್ಲ, ಕಾದಜನ, ನಲ್ಲ, ದರವಿಲ್ಲ, ಅಜ, ಕಾದ, ಜರ, ಕಾಜ, ಅಕಾರ, ಜನ, ಅಲ್ಲ, ಹಂದರ, ಹಂದರವಿಲ್ಲ, ಅಹಂಕಾರ, ಹಂಜರ

ಅಹಂಕಾರವಿಲ್ಲದಜನ

Contact Mr. Nagendra EMAIL
0401193852

ರಂಗೋಲಿ ಬುಕ್

ರಂಗವಲ್ಲಿ

ಭಾರತೀಯ ಸಂಸ್ಕೃತಿಯಲ್ಲಿ, ನಿಯಮ ಪ್ರಕಾರ ಮಾಡುವ ಅನೇಕ ಕಾರ್ಯಗಳಲ್ಲಿ ರಂಗೋಲಿ ಬಿಡಿಸುವುದೂ ಒಂದು. ಸಾಮಾನ್ಯವಾಗಿ ಮನೆಯ ಹೆಣ್ಣು ಮಕ್ಕಳು ತಮ್ಮ ದೈನಂದಿನ ಚಟುವಟಿಕೆಯ ಒಂದು ಅಂಗವಾಗಿ ರಂಗೋಲಿ ಹಾಕುವುದನ್ನು ರೂಡಿಸಿಕೊಂಡಿರುತ್ತಾರೆ. ಮನೆಯ ಮುಂದೆ ರಂಗೋಲಿ ಇದ್ದರೆ ಅದೆಷ್ಟು ಲಕ್ಷಣ!

ಕೇವಲ ಸಂಸ್ಕೃತಿ ಅಷ್ಟೇ ಅಲ್ಲದೆ, ರಂಗೋಲಿ ಬಿಡಿಸುವುದರಿಂದ, ರೇಖಾ ಗಣಿತ ಉತ್ತಮಪಡಿಸಿಕೊಳ್ಳುವಲ್ಲಿ ಸಹಕಾರಿ. ಅದೆಷ್ಟು ಚುಕ್ಕಿಗಳು, ಎಂತೆಂತಹ ರೇಖೆಗಳು, ತರಹಾವರಿ ನಮೂನೆಗಳು. ಅಬ್ಬ! ರಂಗೋಲಿ ನಿಮಗೆ ಬೆರಗು ಮಾಡಿಲ್ಲವೇ? ಒಮ್ಮೆ ರಂಗೋಲಿಯಲ್ಲಿ ಕೈ ಆಡಿಸಿ ನೋಡಿ, ಒಂದು ಕಾವ್ಯವೇ ಹುಟ್ಟೀತು ... ▪

ನಿಮ್ಮ ರಂಗೋಲಿ ಇಲ್ಲಿ ಕಾಣಬೇಕೇ, ಇ-ಮೇಲ್ ಮಾಡಿ: horanadachilume@gmail.com

ಮತ್ತಷ್ಟು ರಂಗುರಂಗಿನ ರಂಗೋಲಿ ಮುಂದಿನ ಸಂಚಿಕೆಯಲ್ಲಿ



ರಚನೆ: ಶ್ರೀಮತಿ ಪುಷ್ಪ ವೆಂಕಟೇಶ್

ನನ್ನ ಸ್ನೇಹಿತ ಗಾಲ್ಫ್ ಪ್ರಿಯ. ಅವನು ಹೇಳುವುದು ಗಾಲ್ಫ್ ಒಂದು addictive sport ಅಂತ. ಆದರೆ ನನಗೆ ಅನ್ನಿಸಿದ್ದು ಬ್ಯಾಡ್ಮಿಂಟನ್ ಬಹಳ addictive ಆಟ ಅಂತ. ನಿಯಮಿತವಾಗಿ ಪ್ರತಿ ಶನಿವಾರ ಮತ್ತು ಭಾನುವಾರ ಬೆಳಿಗ್ಗೆ ಆಡುವ ನನ್ನ ಲಿವರ್ಪೂಲ್ ಗೆಳೆಯರಂತೂ ನನ್ನ ಈ ಮಾತನ್ನು ಒಪ್ಪುತ್ತಾರೆ. ನಾನಂತು ಒಂದು ವಾರದಲ್ಲಿ ೪-೫ ದಿನ ಬ್ಯಾಡ್ಮಿಂಟನ್ ಆಡುತ್ತೇನೆ. ಒಂದು ಥರ ಬ್ಯಾಡ್ಮಿಂಟನ್ addict. ಈಗಿನ ಮಕ್ಕಳು computer game ಆಡಿದಂತೆ.

ಬ್ಯಾಡ್ಮಿಂಟನ್ ಆಟವನ್ನು ಎಂದೂ ಆಡದವರಿಗೆ ಇದೊಂದು ಬಹಳ ಸುಲಭವಾದ ಆಟ ಅಂತ ಅನ್ನಿಸಬಹುದು. ಆದರೆ ಈ ಆಟ ಬಹಳ technical, skilled ಮತ್ತು ದಣಿವಾಗುವ ಆಟ ಕೂಡ. ಬ್ಯಾಡ್ಮಿಂಟನ್ ಆಟ ಮೊದಲು ಶುರುವಾದದ್ದು ಗರ್ಭಿಣಿ ಸ್ತ್ರೀಯರಿಗೆ ವ್ಯಾಯಾಮಕ್ಕೆಂದು. ಆದರೆ ಈಗ ಅದು ಒಂದು ಒಲಿಂಪಿಕ್ಸ್ ಪಂದ್ಯವಾಗಿದೆ.



ಪ್ರಕಾಶ್ ಪಡುಕೋಣೆ

ಬ್ಯಾಡ್ಮಿಂಟನ್ ಅಂದರೆ ನಮಗೆಲ್ಲ ನೆನಪಾಗುವುದು ಕರ್ನಾಟಕದ ಪ್ರಕಾಶ್ ಪಡುಕೋಣೆ. ಪ್ರಕಾಶ್ ಸತತವಾಗಿ ಏಳು ಸಲ ರಾಷ್ಟ್ರೀಯ ಚಾಂಪಿಯನ್ ಆದವರು. ಸಾಕಷ್ಟು ಅಂತರ ರಾಷ್ಟ್ರೀಯ ಪ್ರಶಸ್ತಿ ಗೆದ್ದವರು. ಅದರಲ್ಲಿ ಮುಖ್ಯವಾದದ್ದು All England championship ಗೆದ್ದದ್ದು. ಪ್ರಕಾಶ್ ಅವರ ಮತ್ತೊಂದು ಸಾಧನೆ ಅಂದರೆ ಅಲ್ಲಿಯವರೆಗೆ ಈ ಆಟದ ಮೇಲಿದ್ದ ದಕ್ಷಿಣ ಪೂರ್ವ ಏಷಿಯಾದ ಪ್ರಾಬಲ್ಯವನ್ನು ಮುರಿದರು ಅಂತನೂ ಹೇಳಬಹುದು.

ಪ್ರಕಾಶ್ ಅವರನ್ನು ರಾಷ್ಟ್ರೀಯ ಚಾಂಪಿಯನ್ಶಿಪ್ ನಲ್ಲಿ ಸೋಲಿಸಿದ ಸಯ್ಯದ್ ಮೋದಿ ಸಹ ಒಬ್ಬ ಹೆಸರಾಂತ ಆಟಗಾರ. ಕಾಮನ್ವೆಲ್ತ್ ಗೇಮ್ಸ್ ನಲ್ಲಿ ಚಿನ್ನದ ಪದಕ ತಂದು ಕೊಟ್ಟ ಆಟಗಾರ. ದುರಂತವೆಂದರೆ ಇವರನ್ನು ಹಾಡು ಹಗಲೇ ಗುಂಡಿಕ್ಕಿ ಕೊಲ್ಲಲಾಯಿತು (ಹಂತಕರು ಇನ್ನೂ ಸಿಕ್ಕಿಲ್ಲ, ಹಂತಕರು ಯಾರು? ಅದೊಂದು ತೆರೆದ ರಹಸ್ಯ). ಅಂತರ್ಜಾಲದಲ್ಲಿ ಬಹಳಷ್ಟು ರೋಚಕ ವಿವರಣೆಗಳು ಲಭ್ಯವಿದೆ.

ಗೋಪಿಚಂದ್ ಪಿ.ವಿ.ಸಿಂಧು

ಹೈದರಾಬಾದ್ ಗೂ ಬ್ಯಾಡ್ಮಿಂಟನ್ ಗೂ ಬಹಳ ನಂಟು ಅನ್ನಬಹುದು. ಇತ್ತೀಚೆಗೆ ಬಹಳಷ್ಟು ಆಟಗಾರರು ಅಲ್ಲಿಂದ ಬಂದಿದ್ದಾರೆ. ಬಹುಶಃ ಇದಕ್ಕೆ ಪಿ ಗೋಪಿಚಂದ್ ಕಾರಣವಿರಬಹುದು. ಗೋಪಿಚಂದ ಬ್ಯಾಡ್ಮಿಂಟನ್ ಅಕಾಡೆಮಿ ಬಹಳ ಪ್ರಸಿದ್ಧಿ. ಈಗ ಭಾರತದ ಅಂತರ ರಾಷ್ಟ್ರೀಯ ಮಟ್ಟದಲ್ಲಿ ಪ್ರದರ್ಶನ ಮಾಡುತ್ತಿರುವ ಎಲ್ಲಾ ಆಟಗಾರರು ಇಲ್ಲಿಂದ ತರಬೇತಿ ಹೊಂದಿದವರೆ. ಪುಲೇಲಾ ಗೋಪಿಚಂದ್ ಭಾರತ ಕಂಡ ಮತ್ತೊಬ್ಬ ವಿಶ್ವಮಟ್ಟದ ಆಟಗಾರ. ಹಲವಾರು ಅಂತರರಾಷ್ಟ್ರೀಯ ಪ್ರಶಸ್ತಿ, ಬಹು ಮುಖ್ಯವಾಗಿ All England 2001 ರಲ್ಲಿ ಪ್ರಶಸ್ತಿ ಪಡೆದ ಮತ್ತೊಬ್ಬ ಆಟಗಾರ. ಸೈನಾ ನೇಹಾವಾಲ್ ಹೈದರಾಬಾದಿನ ಮತ್ತೊಬ್ಬ ಆಟಗಾರ್ತಿ. ಗೋಪಿಚಂದ್ ಶಿಷ್ಯೆಯಾದ ಈಕೆ, ವಿಶ್ವದ 3ನೇ rankನ ಆಟಗಾರ್ತಿ. ಕೆಲವರು ಹೇಳುವ ಪ್ರಕಾರ ಕ್ರಿಕೆಟ್ ಆಟಗಾರರನ್ನು ಬಿಟ್ಟು ಅತಿಹೆಚ್ಚು ಸಂಭಾವನೆ ಪಡೆಯುವ ಕ್ರೀಡಾ ಪಟು erotic ಸೈನಾ ಎಂದು ಖ್ಯಾತಿ ಆಗಿರುವ, ಗೆಲ್ಲುವ ಸಮಯದಲ್ಲಿ ಸೋತು, ಸೋಲಿನ ದವಡೆಯಿಂದ ಗೆಲ್ಲುವ ಛಲಗಾತಿ. ಒಲಂಪಿಕ್ಸ್ ನಲ್ಲಿ ಕಂಚು Commonwealthನಲ್ಲಿ ಬಂಗಾರ. ಇವಳಿಂದ All England ಗೆಲ್ಲುವ ನಿರೀಕ್ಷೆ ಕೂಡ ಇದೆ. ಇನ್ನೊಬ್ಬ ಹೈದರಾಬಾದ್ ಆಟಗಾರ್ತಿ ಪಿ ವಿ ಸಿಂಧು ಹದಿನೆಂಟು ವರ್ಷದ ಅತಿ ಎತ್ತರದ ಆಕರ್ಷಕ ಆಟಗಾರ್ತಿ. ಹೋದವರ್ಷ 40ನೇ rankನಲ್ಲಿ ಇದ್ದು ಈಗ 7 ನೇ rankಗೆ ಜಿಗಿದಿರುವಳು. ಭಾರತದ ಭರವಸೆಯ ಆಟಗಾರ್ತಿ, ಪಿ. ವಿ. ಸಿಂಧು ಅವರ ಆಟ ನೋಡಲು ಬಹಳ ಚೆಂದ, "ಯೂಟ್ಯೂಬ್" ನಲ್ಲಿ ಇವರು ಆಡಿರುವ ಪಂದ್ಯಗಳು ಲಭ್ಯವಿದೆ.

ಈಗಂತೂ ಬಹಳಷ್ಟು ಬ್ಯಾಡ್ಮಿಂಟನ್ ಆಟಗಾರರು ವಿಶ್ವಮಟ್ಟದಲ್ಲಿ ಆಡುತ್ತಿದ್ದಾರೆ. ಜ್ವಾಲಾಗುಟ್ಟ, ಅಶ್ವಿನಿ ಪೊನ್ನಾಪ್ಪ, ಕಶ್ಯಪ್, ಅಜಯ್ ಜಯರಾಮ್ ಪ್ರಪಂಚದ 25ನೇ rankನ ಒಳಗೆ ಇದ್ದಾರೆ.

ಈಗ ಭಾರತದಲ್ಲಿ IBL (ಇಂಡಿಯನ್ ಬ್ಯಾಡ್ಮಿಂಟನ್ ಲೀಗ್) ನಡೆಯುತ್ತಿದೆ. ಕ್ರಿಕೆಟ್ಟಿನ IPL ತರಹ. ಭಾರತದಲ್ಲಿ ಕ್ರಿಕೆಟ್ ಬಿಟ್ಟರೆ ಬ್ಯಾಡ್ಮಿಂಟನ್ ಅತಿ ಪ್ರಸಿದ್ಧಿ ಪಡೆದಿರುವ ಆಟವಂತೆ! IBL ಈಗ ಎಲ್ಲ ಕಡೆ ಸುದ್ದಿ. 6 ತಂಡಗಳು ಮುಂಬೈ, ಬೆಂಗಳೂರು, ಪೂನಾ, ಹೈದರಾಬಾದ್, ದೆಹಲಿ ಮತ್ತು ಲಕ್ನೌ. ವಿಶೇಷವೇನೆಂದರೆ ಮುಂಬೈ ತಂಡದ ಒಡೆಯರು ಸುನಿಲ್ ಗವಾಸ್ಕರ್ ಮತ್ತು ಚಿತ್ರನಟ ನಾಗಾರ್ಜುನ. ಈ IBL ಈಗ ಯೂಟ್ಯೂಬ್ ನಲ್ಲಿ ಲೈವ್ ನೋಡಬಹುದು. ಈ IBL ನಿಂದ ಮುಂದೆ ಬಹಳಷ್ಟು ಯುವ ಪ್ರತಿಭೆ ಬರುವ ನಿರೀಕ್ಷೆ ಇದೆ ಹಾಗೂ ಭಾರತದ ಬ್ಯಾಡ್ಮಿಂಟನ್ ಕೂಡಾ ಒಳ್ಳೆ ಭವಿಷ್ಯ ಇದೆ ಎಂದು ಕೆಲ ಪರಿಣಿತರ ಅಭಿಪ್ರಾಯ. ▪

ಛಾಯಾ ಚಿಲುಮೆ – ಕ್ಲಿಕ್ ಕ್ಲಿಕ್ ಕ್ಲಿಕ್

ನೀವು ತೆಗೆದ ಚಿತ್ರ ಇಲ್ಲಿ ಕಾಣಬೇಕೇ

ಇ-ಮೇಲ್ ಮಾಡಿ: horanadachilume@gmail.com



ನಯಾಗರ ಫಾಲ್ಸ್

ಕ್ಲಿಕ್: ವಿಜಯಶ್ರೀ



ನಯಾಗರ ನದಿ

ಕ್ಲಿಕ್: ಅರವಿಂದ್ ಲೋಗನಾಥನ್

ಕಾರಿಂಗ್ ಟನ್ ಉದ್ಯಾನ, ಕ್ಯಾನ್ಬೆರ್ರಾ

ಕ್ಲಿಕ್: ನಾಗರಾಜ್ ನಂಜುಂಡಯ್ಯ

ನೇಸರನ ಮರೆಯಲ್ಲಿ ...

ಕ್ಲಿಕ್: ಬದರಿ ತ್ಯಾಮಗೊಂಡ್ಲು

ಈ ಮಾಯಾಮೃಗದ ಮೈ ಸಾಫ್ಟ್ ಅಂದ್ಕೊಂಡ್ರಾ! ಮುಟ್ಟಿದರ ಬ್ರಷ್ ಇದ್ದಹಾಗಿತ್ತು

ಕ್ಲಿಕ್: ಕನಕಾಪುರ ನಾರಾಯಣ

ಚಾಣ ಕರ್ನಾಟಕ – ಉತ್ತರ

೧. ಕೃಷ್ಣಾ ನದಿ, ಆಲಮಟ್ಟಿ ಅಣೆಕಟ್ಟು (ಬಿಜಾಪುರ ಜಿಲ್ಲೆಯಲ್ಲಿ).

೨. ವೇದಾವತಿ ನದಿ, ವಾಣಿ ವಿಲಾಸ ಸಾಗರ.

(ಚಿತ್ರದುರ್ಗದ ಹಿರಿಯೂರಿನ ಬಳಿ ಇರುವ ಈ ಜಲಾಶಯ ಬಲು ಸುಂದರವಾಗಿದೆ, ನಾಗರಹಾವು ಚಿತ್ರದ "ಕರ್ಪೂರದಾ ಬೊಂಬೆ ನಾನು" ಗೀತೆಯನ್ನು ಇಲ್ಲಿ ಚಿತ್ರೀಕರಿಸಲಾಗಿದೆ).

ಉತ್ತಮ ಪುಸ್ತಕದ ಲಕ್ಷಣಗಳು ...

ಲೇಖನ: ನಾಗಶೈಲ ಕುಮಾರ್

ಉತ್ತಮ ಸ್ನೇಹಿತ, ಪೋಷಕ, ಮಾರ್ಗದರ್ಶಿ, ಉಪಾಧ್ಯಾಯ, ತತ್ವಜ್ಞಾನಿ, ವೈದ್ಯ ಮತ್ತು ಕಲಾವಿದ, ಈ ಎಲ್ಲವೂ ಒಬ್ಬರಲ್ಲೇ ಕಲೆತು ನಮಗೆ ಸಂಗಾತಿಯಾಗಿ ದೊರೆತರೆ? ನಮಗೆ ಬೇಕೆಂದಾಗ, ಬೇಕೆಂದಲ್ಲಿ ಆ ಸಂಗಾತಿ ಸಿಗುವಂತಿದ್ದರೆ?

ಖಂಡಿತ ಅಂತಹ ಸಂಗಾತಿ ಎಂದರೆ ಒಂದು ಉತ್ತಮ ಪುಸ್ತಕ. ನಿಮ್ಮನ್ನು ನಗಿಸುವ, ಅಳಿಸುವ, ಚಿಂತನೆಗೆ ಹಚ್ಚುವ, ರೋಮಾಂಚನಗೊಳಿಸುವ ಸಂಗಾತಿ, ಒಂದು ಉತ್ತಮ ಪುಸ್ತಕ. ನಮ್ಮ ಸುತ್ತಲೂ ನಮಗರಿವಿಲ್ಲದೆಯೇ ಇರುವ ವಿಸ್ಮಯ ಜಗತ್ತಿನ ಪರಿಚಯ ಮಾಡಿಕೊಡುವುದು ಒಂದು ಉತ್ತಮ ಪುಸ್ತಕ. ಉತ್ತಮ ಪುಸ್ತಕವೆಂದರೇ ಇಂತಹುದೇ ವಿಷಯದ್ದು ಇರಬೇಕೆಂಬ ಕಟ್ಟಳೆಯೇನಿಲ್ಲ. ಓದುಗರ ಆಸಕ್ತಿಗನುಸಾರವಾಗಿ ಯಾವುದೇ ಪುಸ್ತಕವೂ ಆಗಿರಬಹುದು. ಕಥೆ ಕಾದಂಬರಿಗಳು, ಜೀವನ ಚರಿತ್ರೆಗಳು, ಇತಿಹಾಸ, ಪುರಾಣ, ವೈಜ್ಞಾನಿಕ, ಪ್ರಾಕೃತಿಕ, ರಾಜಕೀಯ, ಕಲೆ, ಹೀಗೆ ಯಾವ ವಿಷಯವಾದರೂ ಸರಿ, ಆಸಕ್ತ ಓದುಗನನ್ನು ಸೆರೆ ಹಿಡಿದು, ಮುಗಿಯುವವರೆಗು, ಬಿಡದೆಲೆ ಹಿಡಿದಿಟ್ಟು, ಮುಗಿದ ಮೇಲೆ ಚಿಂತನೆಗೆ ಹಚ್ಚಬಲ್ಲದು ಒಂದು ಉತ್ತಮ ಪುಸ್ತಕ.

ಒಂದು ಉತ್ತಮ ಪುಸ್ತಕ, ಯಾವುದೇ ವಿಷಯದ ಬಗ್ಗೆ ಅರಿವು ಮೂಡಿಸಿ, ತಿಳುವಳಿಕೆಯಿಂದ ಮಾತನಾಡಬಲ್ಲ ಆತ್ಮ ವಿಶ್ವಾಸ ಮೂಡಿಸಬಲ್ಲದು, ಕುಳಿತಲ್ಲಿಂದಲೇ ಪ್ರಪಂಚ ಪರ್ಯಟನೆ ಮಾಡಿಸಬಲ್ಲದು. ವೈಭವಯುತ ಅಥವ ಘನ ಘೋರ ಇತಿಹಾಸಗಳ ಭೂತಕ್ಕೆ ಒಯ್ದು, ರಾಜ್ಯಸಾಮ್ರಾಜ್ಯಗಳ ಉತ್ಥಾನ ಪತನಗಳ, ರಾಜ ಮಹಾರಾಜರುಗಳ ದರ್ಭಾರುಕಾರುಭಾರುಗಳ, ಸರ್ವಾಧಿಕಾರಿಗಳು ನಡೆಸಿದ ಮಾರಣ ಹೋಮಗಳ, ಹೆಣ್ಣು, ಹೊನ್ನು, ಮಣ್ಣುಗಳಿಗಾಗಿ ನಡೆದ ಯುದ್ದ ಮಹಾಯುದ್ದಗಳ, ಮತಧರ್ಮ ಕೋಮುಗಳ ಅಂಧ ಶ್ರದ್ಧೆಯಲಿ ನಡೆದ ಅಮಾನವೀಯ ಹಿಂಸಾ ತಾಂಡವಗಳ, ದರ್ಶನ ಮಾಡಿಸಬಲ್ಲದು. ಕಲ್ಪನಾತೀತ ಭವಿಷ್ಯಕ್ಕೆ ಕರೆದೊಯ್ದು ಮುಂದಾಗಬಹುದೆನ್ನುವ ವಿಜ್ಞಾನದ ಅವಿಷ್ಕಾರಗಳ ಉಯ್ಯಾಲೆಯಲಿ ತೂಗಿಸಿ,ಸಕಲ ತಾರಾಲೋಕಗಳ ಸುತ್ತಿಸಿ, ಅನ್ಯ ಲೋಕ ಜೀವಿಗಳೊಡನೆ ಬೆರೆತು ಬಾಳುವಂತೆ ಭ್ರಮೆಯಲ್ಲಿ ರಮಿಸುವುದು.

ಒಂದು ಉತ್ತಮ ಪುಸ್ತಕ ಯಾವುದೇ ವಿಶ್ವವಿದ್ಯಾಲಯಗಳಲ್ಲಿ ಪದವಿ ಪಡೆವುದಕ್ಕಿಂತಲೂ ಹೆಚ್ಚಿನ ಜ್ಞಾನ ನೀಡಬಲ್ಲದು. ಸುದೀರ್ಘ ಪಯಣಗಳನ್ನು ಹ್ರಸ್ವವನ್ನಾಗಿಸಿಯೂ, ಬೇಸರದ ಸಮಯವನ್ನು ರಂಜನೀಯವಾಗಿಯೂ ಮಾಡಬಲ್ಲದು.

ಒಬ್ಬ ಉತ್ತಮ ಲೇಖಕ ತಾನೊಂದು ಪುಸ್ತಕವನ್ನು ಬರೆಯಬೇಕಾದರೆ ಸಾಕಷ್ಟು ಸಿದ್ದತೆ ಮಾಡಿಕೊಳ್ಳುತ್ತಾನೆ. ತಾನು ಬರೆಯಬೇಕಾಗಿರುವ ವಿಷಯಗಳ ಬಗ್ಗೆ ಆಳವಾಗಿ ಅಧ್ಯಯನ ನಡೆಸುತ್ತಾನೆ. ತನಗೆ ತಿಳಿದಿರುವುದರ ಜೊತೆಗೆ ತಾನು ಬರೆಯಲಿರುವ ಕ್ಷೇತ್ರದಲ್ಲಿನ ತಜ್ಞರ ಬಳಿ ಮಾಹಿತಿಸಂಗ್ರಹಿಸುತ್ತಾನೆ.ಉದಾಹರಣೆಗೆ ಒಬ್ಬ ಸಂಗೀತಗಾರನ ಬಗ್ಗೆ ಬರೆಯುವಾಗ, ಅನೇಕ ರೀತಿಗಳಲ್ಲಿ ವಿಷಯ ತಿಳಿದುಕೊಳ್ಳುತ್ತಾನೆ. ಸಂಗೀತಗಾರರನ್ನು ಭೇಟಿ ಮಾಡುವುದರಿಂದ, ಸಂಗೀತ ಕಚೇರಿಗಳಿಗೆ ಹೋಗಿ ಅದರ ವಾತಾವರಣವನ್ನು ಅರಿತುಕೊಳ್ಳುವುದರಿಂದ, ವಿಮರ್ಶಕರ ಜೊತೆ ಮಾತನಾಡಿ, ಕೆಲವು ಸಲ ತಾನೇ ಸಂಗೀತ ಕೂಡ ಕಲಿತು ಅದರ ಅಂತರಾಳಕ್ಕೇ ಹೊಕ್ಕು ಜ್ಞಾನವನ್ನು ಸಂಪಾದಿಸಿರುತ್ತಾನೆ. ಇದೇ ರೀತಿ ನಾಟ್ಯ, ಚಿತ್ರಕಲೆ ಮುಂತಾದ ಕ್ಷೇತ್ರಗಳಲ್ಲಿ ಕೂಡ. ಇನ್ನು ವಿಜ್ಞಾನ, ಪತ್ತೇದಾರಿಕೆ, ಯುದ್ಧ, ಭಯೋತ್ಪಾದನೆ, ರಾಜಕೀಯ, ಚರಿತ್ರೆ ಮತ್ತು ಯಾವುದೇ ವಿಷಯವಿರಲಿ ಆ ಕ್ಷೇತ್ರದ ತಜ್ಞರನ್ನು ಭೇಟಿ ಮಾಡಿಯೋ, ಅಥವಾ ಅಲ್ಲೀಯೇ ಕೆಲವು ಕಾಲ ಓಡಾಡಿ ಸಾಕಷ್ಟು ಅನುಭವ ಗಳಿಸಿ, ನಂತರ ಬರೆಯುತ್ತಾನೆ.ಅಂದರೆ ಅವನು ಆಯಾ ಕ್ಷೇತ್ರಗಳಲ್ಲಿ ಪರಿಣಿತನಾಗಿರಬೇಕೆಂದೇನೂ ಇಲ್ಲ, ಆದರೆ ಅವುಗಳ ಬಗ್ಗೆ ಮಾಹಿತಿ ನೀಡಬಲ್ಲ ಸಾಮರ್ಥ್ಯ ಹೊಂದಿರುತ್ತಾನೆ. ಹೀಗಾಗಿ ಒಂದು ಉತ್ತಮ ಪುಸ್ತಕವನ್ನು ರಚಿಸಲು ವರ್ಷಗಳೇ ಬೇಕಾಗಬಹುದು

ಪ್ರವಾಸ ಕಥನಗಳ ವಿಷಯಕ್ಕೆ ಬಂದರೆ, ಕೆಲವು ಪುಸ್ತಕಗಳು ಕೇವಲ ಸ್ಥಳ ಪರಿಚಯ ಮಾಡಿಕೊಡುವುದಷ್ಟೇ ಅಲ್ಲ, ಒಂದು ಸ್ಥಳದ ಚರಿತ್ರೆ, ಅಲ್ಲಿನ ಆಚಾರ ವಿಚಾರಗಳು, ಜನ ಜೀವನ, ಅಲ್ಲಿನ ಸಂಸ್ಕೃತಿ, ಹೀಗೆ ಅನೇಕ ಮಾಹಿತಿಗಳನ್ನು ನೀಡುತ್ತದೆ.

ಇನ್ನು ವ್ಯಕ್ತಿಗಳ ಜೀವನ ಚರಿತ್ರೆಗಳಂತೂ, ಯಶಸ್ಸನ್ನು ಹೇಗೆ ಗಳಿಸುವುದು ಎನ್ನುವುದಕ್ಕಿಂತಲೂ, ವೈಪಲ್ಯವನ್ನು ಎದುರಿಸಿ ಹೇಗೆ ಬದುಕುವುದು ಎಂಬುದನ್ನು ತಿಳಿಸಿಕೊಡುತ್ತದೆ.ನಾವು ಬೆಳೆದಂತೆ ಬದುಕೇ ನಮಗೆ ಪಾಠ ಕಲಿಸುವಾಗ, ಬೇರೊಬ್ಬರು ಬರೆದದ್ದು ನಮಗೆ ಬೇಕೆ ಎನ್ನಿಸಬಹುದು, ಆದರೆ ಎಲ್ಲರಿಗೂ ಒಂದೇ ರೀತಿಯಲ್ಲಿ ಕಷ್ಟವನ್ನೆದುರಿಸುವ, ಸಮಸ್ಯೆಗಳನ್ನು ನಿಭಾಯಿಸುವ ಮನಃಶಕ್ತಿಯಿರುವುದಿಲ್ಲ, ಅಂತಹ ಸಮಯದಲ್ಲಿ ಕೆಲವು ಪುಸ್ತಕಗಳು ಮಾನಸಿಕ ವೈದ್ಯರ ಕೆಲಸ ಕೂಡ ಮಾಡಬಲ್ಲವು.

ಕೆಲವು ಕತೆ ಕಾದಂಬರಿಗಳು ನಮ್ಮ ಸುತ್ತಲೂ ದಿನನಿತ್ಯ ನಡೆಯುವ ನೈಜ ಘಟನೆಗಳೆ ಆಗಿದ್ದು, ಸಮಾಜದ ಆಗು ಹೋಗುಗಳನ್ನು ಪ್ರತಿಬಿಂಬಿಸುತ್ತದೆ. ಹಾಗಾಗಿ ನಾವೇ ಅದರ ಪಾತ್ರದಾರಿಗಳೆನಿಸುವಷ್ಟು ಸಾಮರಸ್ಯವಿರುತ್ತದೆ. ಇದರಿಂದಾಗಿ ಹಲವು ಸಮಸ್ಯೆಗಳಿಗೆ ಉತ್ತರ ಸಿಗುವ ಸಾಧ್ಯತೆಗಳೂ ಇರುತ್ತದೆ.

ಕಣ್ಣಾರೆ ಕಂಡು, ಸ್ವತಃ ಅನುಭವಿಸುವುದಕ್ಕೆ ಮೊದಲ ಸ್ಥಾನವಾದರೆ, ಬರಹದಲ್ಲಿ ಬಣ್ಣಿಸಿರುವುದನ್ನು ಓದಿ ಅರಿತುಕೊಳ್ಳುವುದಕ್ಕೆ ಎರಡನೆಯೆ ಸ್ಥಾನ. ನೈಜ ಚಿತ್ರಣವನ್ನು ನೀಡಿ, ಮನದಾಳಕ್ಕೆ ಇಳಿಯುವ ಪುಸ್ತಕಗಳು ಉತ್ತಮ ಪುಸ್ತಕಗಳಾಗುತ್ತವೆ, ಚಿಂತನೆಗೆ ತೊಡಗಿಸುತ್ತದೆ, ಸಮಾನ ಅಭಿರುಚಿಯ ಗೆಳೆಯರನ್ನು ಒದಗಿಸುತ್ತದೆ, ತಾವೇ ಸ್ವತಃ ಉತ್ತಮ ಗೆಳೆಯರಾಗುತ್ತದೆ. ಹಲವು ಪುಸ್ತಕಗಳಲ್ಲಿ ಹಾಸ್ಯವೂ ತಾನೇ ತಾನಾಗಿ ಹೊಕ್ಕು ನಮ್ಮ ಹಾಸ್ಯ ಪ್ರಜ್ಞೆಯನ್ನು ಹರಿತಗೊಳಿಸುವಲ್ಲಿ ಸಹಕಾರಿಯಾಗುತ್ತದೆ.

ಉತ್ತಮ ಪುಸ್ತಕಗಳ ಉದಾಹರಣೆ ಹೇಳಬೇಕೆಂದರೆ ನಮ್ಮ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ, ಶಿವರಾಮ ಕಾರಂತ, ಕುವೆಂಪು, ಮಾಸ್ತಿ, ತರಾಸು, ತ್ರಿವೇಣಿ, ಎಂ ಕೆ ಇಂದಿರಾ, ಅನುಪಮಾ ನಿರಂಜನ, ಕೆ ಪಿ ತೇಜಸ್ವಿ, ಎಸ್ ಎಲ್ ಭೈರಪ್ಪ, ಕೆ ಟಿ ಗಟ್ಟಿ, ಹೀಗೆ ಇನ್ನೂ ಹಲವಾರು ಲೇಖಕರ ಕೃತಿಗಳು, ಮನರಂಜನೆ ಮಾತ್ರವಲ್ಲದೆ, ಹಲವಾರು ರೀತಿಗಳಲ್ಲಿ ಓದುಗರನ್ನು ಸೆರೆ ಹಿಡಿದಿವೆ.

ಒಂದು ಉತ್ತಮ ಪುಸ್ತಕವನ್ನು ಓದಿ ಮುಗಿಸುವವರೆವಿಗೂ ನಾನು ಕೈಯಲ್ಲಿ ಹಿಡಿದಿರುತ್ತೇನೆ, ಓದಿ ಮುಗಿಸಿದ ನಂತರ ಆ ಪುಸ್ತಕ ನನ್ನ ಮನದಲ್ಲಿ ಬಹುಕಾಲ ಉಳಿದಿರುತ್ತದೆ. ▪

ಅಮ್ಮನ ನೆನಪು

ಲೇಖನ: ಬದರಿ ತ್ಯಾಮಗೊಂಡ್ಲು

ಬೆಂಗಳೂರಿನ ವಾಹನದ ದಟ್ಟಡವಿಯಲ್ಲಿ ದಾರಿ ಹುಡುಕಿ ಕಚೇರಿಯಿಂದ ಬಂದಾಗ ಆಗಲೇ ಎಂಟರ ಮೇಲಾಗಿತ್ತು. ಎಂದಿನಂತೆ, ಅಮ್ಮ "ಕಾಲ್ ತೊಳ್ಕೊಂಡು ಬಾ, ಊಟ ಮಾಡುವಿಯಂತೆ" ಎಂದರು. ಏನನಿಸಿತೋ ನನಗೆ. "ಅಮ್ಮ ಇವತ್ತು ಪಾನಿ ಪೂರಿ ತಿಂದ್ಕೊಂಡ್ ಬರ್ತೀನಿ" ಅಂದೆ. ಮರು ಮಾತಿಲ್ಲದೆ "ಸರಿನಪ್ಪ, ಮನೆಯಲ್ಲಿ ಅಡುಗೆ ಇದೆ, ಹೇಳ್ದೆ ಅಷ್ಟೇ" ಎಂದು ಸುಮ್ಮನಾದರು.

ಆಚೆ ಹೋಗಿ ಸ್ನೇಹಿತರ ಜೊತೆ ಚೆನ್ನಾಗಿ ಚಾಟ್ಸ್ ತಿಂದು ವಾಪಸ್ ಬಂದಾಗ ರಾತ್ರಿ ಹತ್ತಾಗಿತ್ತು. ಅಮ್ಮ ಹಾಸಿಕೊಂಡು ಮಲಗಿದ್ದರು. ಎಚ್ಚರ ಮಾಡಿಕೊಂಡು, "ಇವತ್ತು ದೇವಸ್ತಾನದಲ್ಲಿ ಪೊಂಗಲ್ ಕೊಟ್ಟಿದ್ದಾರೆ, ನಿಂಗೆ ಇಷ್ಟ ಅಲ್ವ, ಊಟದ ಜೊತೆ ಹಾಕ್ಕೋ" ಎಂದರು. ಸರಿ ಎಂದು ಹೇಳಿ ಕಾಲು ತೊಳೆಯದೇ ರೂಮು ಸೇರಿ ಕಂಪ್ಯೂಟರ್ ನಲ್ಲಿ ಏನೋ ಕುಟ್ಟುತ್ತ ಕೂತೆ. ಹನ್ನೊಂದೋ ಅಥವಾ ಹನ್ನೆರಡೋ ಆಯಿತು ನಿದ್ದೆ ಎಳೆಯತೊಡಗಿದಾಗ ಲೈಟ್ ಆರಿಸಿ ಮಲಗಿದೆ. ಬೆಳಿಗ್ಗೆ ಎದ್ದಾಗ, ಅಮ್ಮ ಅಂದರು "ನಿಂಗೆ ಇಟ್ಟಿದ್ದ ಪೊಂಗಲ್ ಫ್ರಿಡ್ಜ್ ನಲ್ಲಿ ಇಟ್ಟಿದ್ದೀನಿ", ಸ್ನಾನ ಮಾಡಿ ತೊಗೊ...

ಹತ್ತು ಹನ್ನೆರಡು ವರುಷಗಳ ನಂತರದ ಸ್ಥಿತಿ. ಕೆಲಸ ನಿಮಿತ್ತ ಬೇರೆ ಊರಿನಲ್ಲಿ ನೆಲಸಿ, ಒಂದು ಸಂಸಾರದ ಸಾರಥ್ಯ ವಹಿಸಿದೆ. ಈ ನಡುವೆ ಅಮ್ಮನ ನೆನಪಿಗಿಂತ ಆ ಸ್ಥಾನದ ಮಹತ್ವ ಹೆಚ್ಚು ಹೆಚ್ಚಾಗಿ ನೆನಪಾಗುತ್ತಿದೆ. ಅಡುಗೆ ಮಾಡುವ ಸರದಿ ನನ್ನದು. ಮನೆಯಲ್ಲಿ ಅಡುಗೆ ಮಾಡಿಟ್ಟ ದಿನ ಅಡುಗೆ ಖಾಲಿ ಆಗಲಿಲ್ಲವೆಂದರೆ ಮನಸಿಗೆ ಆಗುವ ನೋವು ಅರಿವಾಗುತ್ತಿದೆ. ಒಂದೇ ವ್ಯತ್ಯಾಸ, ಅಮ್ಮ ಎಲ್ಲವನ್ನು ಸಹಿಸಿಕೊಂಡು ಪ್ರೀತಿ ಹರಡುತ್ತಿದ್ದರು. ನಾನು ಮನಸು ಕಸಿವಿಸಿ ಮಾಡಿಕೊಂಡು ಕೊರಗುತ್ತಿದ್ದೇನೆ.

ಸುಮ್ಮನೆ ಹೇಳಿರುವರೇ "ಕ್ಷಮಯಾ ಧರಿತ್ರೀ ... " ಎಂದು.

ಭೂಮಿಯಷ್ಟು ವಿಶಾಲವಾದ ಕ್ಷಮಾ ಗುಣ ಸಂಪನ್ನ ಮಾತೆಗೆ ನನ್ನ ಹೃದಯಾಂತರಾಳದ ನಮನ ...

ಸರಿಸಾಟಿ ಯಾವುದು ನೆಮ್ಮದಿಗೆ, ಅಮ್ಮನ ಮಡಿಲು, ಅಪ್ಪನ ಅಪ್ಪುಗೆ ... ▪

ಕ ನ್ನ ಡ

ತನು ಕನ್ನಡ ಮನ ಕನ್ನಡ

ಕರ್ನಾಟಕದಲ್ಲಿ ಧರ್ಮ ಸಮನ್ವಯ

ಲೇಖಕರು: ಹರೀಶ್ . ಜಿ

- ಜೈನ ಧರ್ಮ - ಭಾರತದ ಶೇ ೫೦ಕ್ಕೂ ಹೆಚ್ಚು ಜೈನ ಸ್ಮಾರಕಗಳು ತೀರ್ಥಕ್ಷೇತ್ರಗಳು ಕರ್ನಾಟಕದಲ್ಲಿವೆ
- ಹಿಂದೂ ತ್ರಿಮತಸ್ತರಿಗೂ ಪವಿತ್ರಸ್ಥಾನ
- ಹಿಂದೂಧರ್ಮ ಪುನರುದ್ಧಾರಕರಾದ ಆದಿಶಂಕರರ ಕರ್ಮಭೂಮಿ ಕರ್ನಾಟಕದ ಶೃಂಗೇರಿ
- ಶ್ರೀವೈಷ್ಣವ - ಶ್ರೀರಾಮಾನುಜಾಚಾರ್ಯರು ಚೋಳರಾಜನಿಂದ ತಿರಸ್ಕೃತರಾಗಿ ಹೊಯ್ಸಳರಲ್ಲಿ ಆಶ್ರಯಪಡೆದರು
- ಶೈವ - ಕರ್ನಾಟಕವು ವೀರಶೈವ ಧರ್ಮದ ಉಗಮಸ್ಥಾನ.
- ವೀರಶೈವಧರ್ಮದ ಅಧ್ವರ್ಯುಗಳಾದ ಅಲ್ಲಮಪ್ರಭು ಬಸವಣ್ಣ ಅಕ್ಕಮಹಾದೇವಿಯರು ಅಚ್ಚ ಕನ್ನಡಿಗರು
- ಮಾಧ್ವ - ಶ್ರೀ ಮಧ್ವಾಚಾರ್ಯರ ಪವಿತ್ರ ಕರ್ಮಭೂಮಿ
- ಮುಸಲ್ಮಾನ - ಮಧ್ಯಯುಗದಿಂದ ಇಲ್ಲಿ ನೆಲೆಸಿರುವ ನಮ್ಮ ಮಣ್ಣಿನ ಮಕ್ಕಳೇ ಆದ ಮುಸಲ್ಮಾನರಲ್ಲಿನ ಅನೇಕ ಸಂತರು ನಮ್ಮ ಸಾಮಾಜಿಕ ಸಂಸ್ಕೃತಿಗೆ ಬಳುವಳಿ ನೀಡಿದ್ದಾರೆ (ಉದಾ: ಶಿಶುನಾಳರು)
- ಹೊಯ್ಸಳರ ಒಂದು ಶಾಸನ ಹೀಗೆ ಹೇಳುತ್ತದೆ: (ಬೇಲೂರಿನ ಚೆನ್ನಕೇಶವ ದೇವಾಲಯದಲ್ಲಿ)

  ಯಂ ಶೈವಾಃ ಸಮುಪಾಸತೇ ಶಿವೇತಿ ಬ್ರಹ್ಮೇತಿ ವೇದಾಂತಿನಃ । ಬೌದ್ಧಾಃ ಬುದ್ಧ ಇತಿ ಪ್ರಮಾಣಪಟವಃ ಕರ್ತ ಇತಿ ನೈಯಾಯಿಕಾಃ
  ಅರ್ಹನ್ ಇತ್ಯಥಿ ಜೈನ ಶಾಸನರತಾಃ ಕರ್ಮೇತಿ ಮೀಮಾಂಸಕಾಃ । ಸೋಯಂ ವೋ ವಿಧಧಾತು ವಾಂಛಿತಫಲಂ ತ್ರೈಲೋಕನಾಥೋ ಹರಿಃ

  ಅರ್ಥಾತ್

ಯಾವ ದೇವನನ್ನುವೇದಾಂತಿಗಳು ಬ್ರಹ್ಮನೆಂದು, ಶೈವರು ಶಿವನೆಂದು, ಭೌದ್ಧರು ಬುದ್ಧನೆಂದು, ನೈಯ್ಯಾಯಿಕರು ಕರ್ತನೆಂದು, ಜೈನರು ಅರಿಹಂತನೆಂದು, ಮೀಮಾಂಸಕರು ಕರ್ಮನೆಂದು ತಿಳಿಯುತ್ತಾರೋ ಅಂತಹ ದೈವನು ತ್ರಿಲೋಕನಾಥನಾದ ಶ್ರೀ ಹರಿಯು. ಅವನು ಮನದ ಅಪೇಕ್ಷೆಯನ್ನು ದಯಪಾಲಿಸಲಿ

ವಿಜ್ಞಾನ ತತ್ವ

ಎಣ್ಣೆ ಮತ್ತು ನೀರು ಏಕೆ ಬೆರೆಯುವುದಿಲ್ಲ

ಬದರಿ ತ್ಯಾಮಗೊಂಡ್ಲು

ಎಣ್ಣೆಯ ಮೇಲೆ ನೀರು ಹಾಕಿ ಅಥವಾ ನೀರಿನಲ್ಲಿ ಎಣ್ಣೆ ಹಾಕಿ ಚೆನ್ನಾಗಿ ಕಲಕಿ. ಆದರೂ ಅವೆರಡು ಬೆರೆಯುವುದಿಲ್ಲ ಏಕೆ?

ಸಾಮಾನ್ಯವಾಗಿ ನೀರು ಇನ್ನಿತರೇ ದ್ರವ ಪದಾರ್ಥದ ಜೊತೆ ಬೆರೆಯುತ್ತದೆ. (ಉದಾ: ಬೆಲ್ಲದ ಪಾಕಕ್ಕೆ ಹಾಲು ಬೆರೆಸಬಹುದು, ನೀರಿಗೆ ಹಾಲು, ಇತ್ಯಾದಿ). ಆದರೆ ಎಣ್ಣೆಯ ಜೊತೆ ಬೆರೆಯದಿರುವುದರ ಹಿಂದಿನ ವಿಜ್ಞಾನ ತತ್ವ ಹೀಗಿದೆ.

ನೀರಿನ ಅಣುಗಳು ಮತ್ತು ಎಣ್ಣೆಯ ಅಣುಗಳು ತಮ್ಮ ತಮ್ಮ ಅಣುಗಳ ಆಕರ್ಷಣೆಗೆ ಒಳಗಾಗುವ ಸ್ವಭಾವ ಹೊಂದಿರುತ್ತದೆ. ಹೀಗಾಗಿ ನೀವು ನೀರು ಮತ್ತು ಎಣ್ಣೆಯ ಮಿಶ್ರಣ ಮಾಡಿದಾಗ, ಅದರದರ ಅಣುಗಳ ಜೊತೆ ಬೆರೆತು ಪ್ರತ್ಯೇಕವಾಗಿಯೇ ಉಳಿಯುತ್ತದೆ. ಹಾಗೇ ನೀವು ಗಮನಿಸಿರಬಹುದು. ಎಣ್ಣೆ ತೇಲುತ್ತದೆ. ಏಕೆಂದರೆ ಎಣ್ಣೆಯ ಸಾಂದ್ರತೆ ನೀರಿನದಕ್ಕಿಂತ ಕಡಿಮೆ ಇರುತ್ತದೆ.

ಎಣ್ಣೆ ನೀರು ಏಕೆ ಬೆರೆಯುವುದಿಲ್ಲ ಎಂಬ ವಿಜ್ಞಾನ ತತ್ವ ಅರಿತಿರಿ. ಈ ತತ್ವವನ್ನು ನೋಡಿದಾಗ, ನಮ್ಮ ಸಮಾಜದಲ್ಲಿ ನಾವುಗಳೆಲ್ಲ ಎಣ್ಣೆ ನೀರಿನಂತಿರದೆ ಹಾಲು ಜೇನಾಗಿ ಬೆರೆತು ಜೀವನವನ್ನು ಆಸ್ವಾದಿಸುವುದು ಒಳ್ಳೆಯದು ಎನಿಸುವುದಿಲ್ಲವೇ !

ಅಲ್ಲಲ್ಲಿ ಏನೇನು

ನಿಮ್ಮ ಕಾರ್ಯಕ್ರಮವಿದ್ದರೆ ತಿಳಿಸಿ - horanadachilume@gmail.com

Friends of India organising ಗಣೇಶೋತ್ಸವ

Whitlam leisure centre,
90a Memorial Ave, Liverpool NSW 2170

Sept 14 & 15th September
14th Morning 8 AM Ganesha Pooje,
Cultural Function - Evening 5 pm onwards followed by Dinner

15th Sathyanarayana Pooje & Visarjana

ತಲ್ಲಣ – ಚಲನಚಿತ್ರ

ತಾರಾಗಣ: ಕೆ.ಎಸ್.ಶ್ರೀಧರ್, ನಿರ್ಮಲಾ, ನಾಗೇಂದ್ರ ಶಾ, ಚಿತ್ರಕತೆ, ನಿರ್ದೇಶನ: ಸುದರ್ಶನ್. ಎನ್.

ಸ್ಥಳ : Hurstville Civic Theatre, Hurstville,

ಭಾನುವಾರ Sept 22nd, 3 ಗಂಟೆಗೆ & 6 ಗಂಟೆಗೆ **(2 shows)**

ಪ್ರವೇಶ: $15 (ಮಕ್ಕಳು ಹಾಗು ಇತರರಿಗೆ: $12)

ಟಿಕೆಟ್‌ಗಳಿಗೆ ಸಂಪರ್ಕಿಸಿ:

ವೀಣಾ ಸುದರ್ಶನ್ : 0410 432 528, ಸ್ಮಿತಾ ಮೇಲ್ಕೋಟೆ : 0488295837, ನಾರಾಯಣ : 0423 634 979
ಸುದರ್ಶನ್ : 0414 992 528

Deepavali Fair

Organised by Hindu council of Australia

Venue:
Sydney Olympic Park Athletic Centre

Date:
Sunday 26th Oct from 12 PM – 8:30 PM

ENTRY:
$7 per person

MultiCultural Dances, Ravan Effigy,
Fireworks.

ನಮ್ಮ
ಸುತ್ತಾ
ಮುತ್ತಾ

Ganesha Visarjan Festival

VENUE: Sri Venkateswara Temple, Temple Road, Helensburgh, NSW 2508

Sunday15th Sept 2013

Pooja and function at 12noon

Visarjan at 3pm

Special buses from Parramatta, Homebush and other Suburbs.

More details at www.svtsydney.org

ಈ ಸಂಚಿಕೆ ನಿಮಗಾಗಿ ತಂದವರು – ಸುಗಮ ಕನ್ನಡ ಕೂಟ – ಸಿಡ್ನಿ, ಆಸ್ಟ್ರೇಲಿಯಾ

ವಿನ್ಯಾಸ ಮತ್ತು ಮುಖ್ಯ ಸಂಪಾದಕರು – ಬದರಿ ತ್ಯಾಮಗೊಂಡ್ಲು ~ ಸಂಕಲನ – ವೀಣಾ ಸುದರ್ಶನ್, ರಾಜಲಕ್ಷ್ಮಿ ನಾರಾಯಣ

ಸಲಹಾ ಸಮಿತಿ –ಕನಕಾಪುರ ನಾರಾಯಣ, ನಾಗೇಂದ್ರ ಅನಂತಮೂರ್ತಿ

ಸೂಚನೆ: ಈ ಸಂಚಿಕೆಯಲ್ಲಿ ಪ್ರಕಟವಾಗಿರುವ ಎಲ್ಲ ವಿಷಯಗಳು ವಿವಿಧ ಲೇಖಕರ ಅನಿಸಿಕೆಗಳು. ಯಾವುದೇ ಅನಾನುಕೂಲವಾದಲ್ಲಿ "ಸುಗಮ ಕನ್ನಡ ಕೂಟ" ಅಥವಾ ಅದಕ್ಕೆ ಸಂಬಂಧಿಸಿದ ವ್ಯಕ್ತಿಗಳು ಜವಾಬ್ದಾರರಲ್ಲ. ಈ ಸಂಚಿಕೆಯಲ್ಲಿ ಪ್ರಕಟವಾದ ಎಲ್ಲ ಸುದ್ದಿ ಮಾಹಿತಿ, ಚಿತ್ರಗಳ ಹಕ್ಕುಗಳು ಸ್ಪಷ್ಟವಾಗಿ ಉಲ್ಲೇಖಿಸಿರದಿದ್ದರೆ ಅದು ಸುಗಮ ಕನ್ನಡ ಕೂಟಕ್ಕೆ ಸೇರಿದೆ.
ಸಂಚಿಕೆಯಲ್ಲಿ ಬಳಸಿದ ಹಲವು ಚಿತ್ರಗಳು ಅಂತರ್ಜಾಲದಿಂದ ಪಡೆದದ್ದು. ಅದರ ಎಲ್ಲ ಹಕ್ಕೂ ಅದರದರ ಕರ್ತೃಗಳಿಗೆ ಸೇರಿದ್ದು.